ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 81 RNI Number : KNKAN/25/A2770 31-03-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :81 ರಾಯಚೂರು 31-03-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಜನಪರ ಆಡಳಿತಕ್ಕಾಗಿ ಕಾಂಗ್ರೆಸ್ ಗೆಲ್ಲಿಸಿ- ಸಚಿವ ಎನ್ ಎಸ್ ಬೋಸರಾಜು

ಕೇರಳ,ಮಾ.30-

ದೇಶದಲ್ಲಿ ನಮ್ಮೆಲ್ಲರಲ್ಲಿ ಶಾಂತಿ ಸೌಹಾರ್ದತೆ ಹಾಗೂ ಸಮ ಸಮಾಜ ನಿರ್ಮಾಣಕ್ಕಾಗಿ ಸೇರಿದಂತೆ ಸರ್ವಾಂಗಿಣ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಕರ್ನಾಟಕ ರಾಜ್ಯದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಕೇರಳ ವಿಧಾನಸಭಾ ಚುನಾವಣೆ ಯಲ್ಲಿ ಮಾತಯಾಚನೆ ಮಾಡಿದರು.



ಕೇರಳ ವಿಧಾನಸಭಾ ಚುನಾವಣೆಯ ನಿಮಿತ್ತ ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಕೇರಳ ರಾಜ್ಯದ ತಿಕ್ಕರಿಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೋಡ್ ಶೋ ಮೂಲಕ ಭರ್ಜರಿ ಪ್ರಚಾರ ನಡೆಸಿದರು.

ಕಾಂಗ್ರೆಸ್ ಪಕ್ಷ ಸ್ವತಂತ್ರ ಪೂರ್ವ ದಿಂದಲೂ ಅನೇಕ ಜನಪರ ಯೋಜನೆಯ ಗುರಿಯೊಂದಿಗೆ ಅಧಿಕಾರದಲ್ಲಿದ್ದಾಗ ಜನಪರ ಆಡಳಿತದ ನೀಡಿದ ಹೆಮ್ಮೆಯ ಪಕ್ಷವಾಗಿದೆ, ನಮ್ಮೆಲ್ಲರ ಐಕ್ಯತೆ ಹಾಗೂ ಸರ್ವ ಜನಾಂಗದ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷದ ಕೈ ಹಿಡಿಯಬೇಕು ಎಂದು ಮತಯಾಚನೆ ಮಾಡಿದರು.

ದೇಶದ ಆರ್ಥಿಕ ಸಾಮಾಜಿಕ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಸಾಮಾಜಿಕ ಸಮಾನತೆಗಾಗಿ, ಕಾಂಗ್ರೆಸ್ ಪಕ್ಷ ನೀಡಿದ ಎಲ್ಲಾ ಪ್ರಣಾಳಿಕೆಗಳ ಈಡೇರಿಕಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಈಗಾಗಲೇ ಕರ್ನಾಟಕ ಮತ್ತು ತೆಲಂಗಾಣದಲ್ಲಿ ನಮ್ಮ ಸರ್ಕಾರ ಆಡಳಿತದಲ್ಲಿದ್ದು ಚುನಾವಣೆಯಲ್ಲಿ ನೀಡಿದ ಎಲ್ಲಾ ಭರವಸೆಗಳನ್ನ ಈಡೇರಿಸುವ ಮೂಲಕ ಜನಮನ್ನಣೆಯನ್ನು ಗಳಿಸಿದ್ದೇವೆ. ದೇಶದಲ್ಲಿ ನುಡಿದಂತೆ ನಡೆಯುವ ಪಕ್ಷ ಯಾವುದಾದರು ಇದ್ದರೆ ಅದು ಕಾಂಗ್ರೆಸ್ ಪಕ್ಷ ಎಂದು ತಿಳಿಸಿದರು.

ನಂತರ ವಿವಿಧ ವಿಧಾನ ಸಭಾ ಕ್ಷೇತ್ರಗಳ ಬ್ಲಾಕ್ ಮಟ್ಟದಲ್ಲಿ ಕಾರ್ಯಕರ್ತರನ್ನು ಭೇಟಿ ಮಾಡಿ ಚುನಾವಣೆ ಗೆಲುವಿನ ತಂತ್ರಗಾರಿಕೆಯ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಮಾರ್ಟಿನ್ ಜಾರ್ಜ್, ಕಣ್ಣೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಮಾಜಿ ಶಾಸಕರಾದ ವೇಣುಗೋಪಾಲ್ ಸೇರಿ ಮುಂಚೂಣಿಯ ನಾಯಕರು ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಯುವತಿ ಅನುಮಾನಾಸ್ಪದವಾಗಿ ಮೃತ

ರಾಯಚೂರು,ಮಾ.30-

ನಗರದ ವಿಜ್ಞಾನ ಕೇಂದ್ರದಲ್ಲಿ ಪ್ರೋಗ್ರಾಮ್ ಅಸಿಸ್ಟೆಂಟ್ ಆಗಿ ಕೆಲಸಮಾಡುತ್ತಿದ್ದ ಯುವತಿಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಮೃತಳ ಪೋಷಕರು ಪತಿ ಮತ್ತು ಅತ್ತೆಯ ವಿರುದ್ಧ ವರದಕ್ಷಿಣೆ ಕಿರುಕುಳ ಮತ್ತು ಕೊಲೆ ಆರೋಪವನ್ನು ಮಾಡಿದ್ದಾರೆ.

ನಗರದ ಐಬಿ ರಸ್ತೆಯ ನಿವಾಸಿ ವಿದ್ಯಾ ಅಲಿಯಾಸ್ ಸುಧಿಕ್ಷಾ (30) ಮೃತ ಮಹಿಳೆ. ಸುಧಿಕ್ಷಾಗೆ ಮೂರು ವರ್ಷಗಳ ಹಿಂದೆ ಮಂಜುನಾಥ ಎಂಬಾತನೊಂದಿಗೆ ವಿವಾಹವಾಗಿತ್ತು. ಮದುವೆಯಾಗಿ ನಾಲ್ಕು ತಿಂಗಳಲ್ಲೇ ಪತಿ ಮಂಜುನಾಥ್ ಮತ್ತು ಮನೆಯವರು ವರದಕ್ಷಿಣೆ ಕಿರುಕುಳ ನೀಡುತ್ತಿರುವ ಬಗ್ಗೆ ಸುಧಿಕ್ಷಾ ತನ್ನ ಪೋಷಕರಿಗೆ ತಿಳಿಸಿದ್ದರು.



ಸುಧಿಕ್ಷಾಳನ್ನು ಪತಿ ಮತ್ತು ಅತ್ತೆ ಸೇರಿ ಕತ್ತು ಹಿಸುಕಿ ಕೊಲೆ ಮಾಡಿ ನಂತರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಬಿಂಬಿಸಿದ್ದಾರೆ ಎಂದು ಮೃತಳ ತಂದೆ ಆರೋಪಿಸಿದ್ದಾರೆ.

ಈ ಕುರಿತು ನಗರದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ರಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ರಿಮ್ಸ್ ಶವಗಾರದ ಮುಂದೆ ಮೃತಳ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ನ್ಯಾಯ ಒದಗಿಸಬೇಕು ಎಂದು ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ಶಾಂತವೀರ ಹಾಗೂ ತಹಶೀಲ್ದಾರ್ ಪರಶುರಾಮು ಸೇರಿದಂತೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಜ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ: ಆರ್.ಅಶೋಕ್ ವಾಗ್ದಾಳಿ

ಬೆಂಗಳೂರು,ಮಾ.30-

ಎಸ್ಸೆಸ್ಸೆಲ್ಸಿ ಯಲ್ಲಿ ಹಿಂದಿ ಭಾಷೆ ಅಂಕಗಳನ್ನು ತೆಗೆದು ಹಾಕುವ ಮೂಲಕ ರಾಜ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅನಗತ್ಯವಾಗಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟು ಮಾಡಬೇಕೆಂಬ ಕಾರಣಕ್ಕಾಗಿಯೇ ಎಸ್ಸೆಸ್ಸೆಲ್ಸಿ ಹಿಂದಿ ಪ್ರಶ್ನೆಪತ್ರಿಕೆ ಅಂಕಗಳನ್ನು ಪರಿಗಣಿಸದಿರಲು ತೆಗೆದುಕೊಂಡಿ ರುವ ನಿರ್ಧಾರ ಸರಿಯಲ್ಲ ಎಂದು ಆಕ್ಷೇಪಿಸಿದರು.

ಹಿಂದಿ ಬಳಕೆ ವಿರೋಧಿಸುವ ಮೂಲಕ ರಾಜ್ಯ ಸರ್ಕಾರ ತುಘಲಕ್ ನೀತಿ ಅನುಸರಿಸುತ್ತಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದಿ ಪ್ರಚಾರ ಸಮಿತಿಗಳ ಮೂಲಕ ಹಿಂದಿ ಕಲಿಕೆಗೆ ಉತ್ತೇಜನ ಕೊಡಬೇಕು ಎಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಕರೆ ಕೊಟ್ಟಿದ್ದರು. ಏಕಾಏಕಿ ಈಗ ಈ ಹಿಂದಿ ರದ್ದು ಮಾಡಿರುವುದು ಎಷ್ಟು ಸರಿ ? ಎಂದು ಪ್ರಶ್ನೆ ಮಾಡಿದರು.

ಲಕ್ಷಾಂತರ ಮಕ್ಕಳು ಕಷ್ಟಪಟ್ಟು ಓದಿದ ಹಿಂದಿ ಭಾಷೆಯೇ ಈಗ ಬೇಡ ಅಂದರೆ ಹೇಗೆ? ಇದರ ಹಿಂದೆ ಇರುವ ಶಕ್ತಿಗಳು ಯಾವುದು? ಹೈಕಮಾಂಡ್ ಮೆಚ್ಚಿಸುವುದಕ್ಕಾಗಿ ಶಿಕ್ಷಣ ತಜ್ಞರು, ಪೋಷಕರು, ಮಕ್ಕಳ ಜೊತೆ ಸೌಜನ್ಯಕ್ಕಾದರೂ ಚರ್ಚೆ ನಡೆಸದೆ ಈ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ. ಶಿಕ್ಷಣದಲ್ಲೂ ಕಾಂಗ್ರೆಸ್ ರಾಜಕಾರಣ ಮಾಡಲು ಹೊರಟಿದೆ ಎಂದು ಆರೋಪಿದರು.

ಶೈಕ್ಷಣಿಕವಾಗಿ ಸ್ಕೋರ್ ಮಾಡಲು ಅವಕಾಶ ನೀಡುತ್ತಿದ್ದ ಭಾಷೆ ಇಲ್ಲವಾಗಿದೆ. ಒಂದು ವರ್ಷದ ಕಾಲ ಮಕ್ಕಳು ಓದಿದ ಭಾಷೆಗೆ ಬೆಲೆ ಇಲ್ಲವೇ? ಗಾಂಧಿ ಹೆಸರು ಹೇಳುವ ನೀವು ಈಗ ಒಇ ವಿಚಾರದ ಬಗ್ಗೆ ಯಾವ ಸ್ಪಷ್ಟೀಕರಣ ಕೊಡುತ್ತೀರಾ? ಎಂದು ಕಾಂಗ್ರೆಸ್ ನಾಯಕರನ್ನು ಅಶೋಕ್ ತರಾಟೆಗೆ ತೆಗೆದುಕೊಂಡಿದ್ದಾರೆ.

ರಾಜ್ಯದಲ್ಲಿ ನೀರು - ವಿದ್ಯುತ್ ದರ ಏರಿಕೆ ಫಿಕ್ಸ್ !

ಬೆಂಗಳೂರು, ಮಾ.30-

ಹೊಸ ವರ್ಷದ ಆರ್ಥಿಕ ವರ್ಷದ ಆರಂಭದ ದಿನದಿಂದಲೇ ರಾಜ್ಯದ ಜನತೆಗೆ ಪವರ್ ವಾಟರ್ ಶಾಕ್ ಆಗಲಿದೆ. ಯಾಕೆಂದರೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಏ. 1ರಿಂದ ಹೊಸ ದರ ಜಾರಿಗೆ ತರುವ ಬಗ್ಗೆ ಅಂತಿಮ ಹಂತದ ಚರ್ಚೆಯಲ್ಲಿ ತೊಡಗಿದೆ.ಯೂನಿಟ್‌ಗೆ 40 ರಿಂದ 50 ಪೈಸೆ ಹೆಚ್ಚಳ ಸಾಧ್ಯತೆ ಇದೆ.

ಬೆಸ್ಕಾಂ ಸೇರಿದಂತೆ ಐದು ಎಸ್ಕಾಂಗಳ ಪ್ರಸ್ತಾವನೆಯಂತೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 40 ರಿಂದ 50 ಪೈಸೆವರೆಗೆ ಹೆಚ್ಚಳ ಮಾಡುವ ಸಾಧ್ಯತೆ ಇದೆ. ನಷ್ಟದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳು ಆದಾಯದ ಕೊರತೆ ಸರಿಪಡಿಸಲು ಈ ಕ್ರಮ ಅನಿವಾರ್ಯ ಎಂದು ಅಧಿಕಾರಿಗಳು ವಾದಿಸಿದ್ದಾರೆ. ಗೃಹ ಬಳಕೆದಾರರು, ವಾಣಿಜ್ಯ ಬಳಕೆದಾರರು ಹಾಗೂ ಕೈಗಾರಿಕಾ ಕ್ಷೇತ್ರದ ಮೂರು ವರ್ಗಗಳಿಗೂ ದರ ಏರಿಕೆಯ ನೇರ ಪರಿಣಾಮ ಬೀಳಲಿದೆ.

ಗೃಹ ಜ್ಯೋತಿ ಫಲಾನುಭವಿಗಳಿಗೆ ವಿನಾಯಿತಿ ಸಿಗುವ ಸಾಧ್ಯತೆಗಳಿವೆ. ಗೃಹ ಜ್ಯೋತಿ ಯೋಜನೆಯಡಿ 200



ಯೂನಿಟ್ ಒಳಗೆ ವಿದ್ಯುತ್ ಬಳಸುವ ಗ್ರಾಹಕರ ಬಿಲ್ ಅನ್ನು ಸರ್ಕಾರವೇ ಭರಿಸುವುದರಿಂದ ಅವರಿಗೆ ನೇರ ಹೊರೆ ಇರುವುದಿಲ್ಲ. ಆದರೆ 200 ಯೂನಿಟ್ ಮೀರಿದ ಬಳಕೆದಾರರು ಹೆಚ್ಚಿದ ದರವನ್ನು ಪಾವತಿಸಬೇಕಾಗುತ್ತದೆ.ಸ್ಥಿರ ಶುಲ್ಕವೂ ಏರಿಕೆ ಸಾಧ್ಯತೆಯೂನಿಟ್ ದರ ಮಾತ್ರವಲ್ಲದೆ, ಸ್ಥಿರ ಶುಲ್ಕವನ್ನೂ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ.ವಾಣಿಜ್ಯ ವಿದ್ಯುತ್ ದರ ಏರಿಕೆಯಾದರೆ ಹೋಟೆಲ್, ಸಣ್ಣ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗಿ, ಅದರ ಪರಿಣಾಮವಾಗಿ ವಸ್ತುಗಳ ಬೆಲೆ ಏರಿಕೆ ಸಾಧ್ಯತೆ ಇದೆ.

ಇದರ ಜೊತೆಗೆ ಏ. 1ರಿಂದ ಬೆಂಗಳೂರಿನಲ್ಲಿ ನೀರಿನ ಬಿಲ್ಲಿನಲ್ಲೂ ಶೇ. 3ರಷ್ಟು ಹೆಚ್ಚಳ ಜಾರಿಗೆ ಬರಲಿದೆ.ನೀರಿನ ಸರಬರಾಜು ವೆಚ್ಚ ಹೆಚ್ಚಳ.ನಿರ್ವಹಣಾ ವೆಚ್ಚ ಏರಿಕೆವಿದ್ಯುತ್ ಮತ್ತು ಮೂಲಸೌಕರ್ಯ ಖರ್ಚು ಹೆಚ್ಚಳ. ಜಲಮಂಡಳಿಯ ಆರ್ಥಿಕ ಒತ್ತಡ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಗ್ಯ ತಪಾಸಣೆ ಪ್ಯಾಕೇಜ್

ಕಳೆದ ವರ್ಷವೇ ಪ್ರತಿವರ್ಷ ನೀರಿನ ದರವನ್ನು ಶೇ. 3ರಷ್ಟು ಹೆಚ್ಚಿ ಸಲು ಅನುಮೋದನೆ ನೀಡಲಾಗಿದ್ದು, ಅದರ ಭಾಗವಾಗಿ ಈ ವರ್ಷದ ಏರಿಕೆ ಜಾರಿಯಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಏಪ್ರಿಲ್ 1ರಿಂದ ವಿದ್ಯುತ್ ಹಾಗೂ ನೀರಿನ ದರ ಏರಿಕೆಯಿಂದ ಬೆಂಗಳೂ ರಿನ ಜನತೆಗೆ ದ್ವಿಗುಣ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ನಡುವೆ ಯೇ ಈ ದರ ಏರಿಕೆ ಜನರಲ್ಲಿ ಮಿಶ್ರ ಪ್ರತಿಕ್ರಿಯೆ ದೊರೆತಿದೆ.

ರೈತರಿಂದ ಭಾರೀ ಮೆರವಣಿಗೆ ಕಾರ್ಪೊರೇಟ್ ನೀತಿಗಳ ವಿರುದ್ಧ ಘೋಷಣೆಗಳು



ರಾಯಚೂರು, ಮಾ.30-

ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣದಿಂದ ಆರಂಭವಾದ ಭಾರೀ ಮೆರವಣಿಗೆ ಇಂದು ರಾಯಚೂರು ನಗರವನ್ನು ಕಂಗೊಳಿಸಿತು. ಸಾವಿರಾರು ರೈತರು, ಕಾರ್ಮಿಕರು ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಕೆಂಪು ಧ್ವಜಗಳನ್ನು ಹಿಡಿದು ಸರ್ಕಾರದ ಕೃಷಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಮೆರವಣಿಗೆ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಬಸ್‌ಸ್ಟ್ಯಾಂಡ್ ರಸ್ತೆ ಮಾರ್ಗವಾಗಿ ಸಾಗುತ್ತಾ ಮಹಾನಗರ ಪಾಲಿಕೆ ಮುಂದೆ ಹಾದು ಟಿಪ್ಪು ಸುಲ್ತಾನ್ ಗಾರ್ಡನ್ವರೆಗೆ ತಲುಪಿತು. ಬಳಿಕ ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ರೈತ ನಾಯಕರು ಸರ್ಕಾರದ ನೀತಿಗಳನ್ನು ತೀವ್ರವಾಗಿ ಟೀಕಿಸಿದರು.

ಈ ಮೆರವಣಿಗೆ ಹಾಗೂ ಸಭೆಯನ್ನು ಕರ್ನಾಟಕ ರಾಜ್ಯ ರೈತ ಸಂಘ () ಮತ್ತು ಆಲ್ ಇಂಡಿಯಾ ಯುನೈಟೆಡ್ ಕಿಸಾನ್ ಸಂಘರ್ಷ ಸಮಿತಿ () ಸಂಯುಕ್ತವಾಗಿ ಆಯೋಜಿಸಿದ್ದು, 8ನೇ ರಾಜ್ಯ ಸಮ್ಮೇಳನದ ಅಂಗವಾಗಿ ನಡೆದಿದೆ.

ಸಭೆಯಲ್ಲಿ ಮಾತನಾಡಿದ ನಾಯಕರು,

''ಕಾರ್ಪೊರೇಟ್ ಪರ ಕೃಷಿ ಕಾಯ್ದೆಗಳು ರೈತರಿಗೆ ಮರಣ ಶಾಸನವಾಗಿವೆ. ಕೃಷಿ ಭೂಮಿಯನ್ನು ಕಂಪನಿಗಳ ಕೈಗೆ ಒಪ್ಪಿಸುವ ನೀತಿಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು'' ಎಂದು ಆಗ್ರಹಿಸಿದರು.

ಮೆರವಣಿಗೆಯಲ್ಲಿ ಸಂಪ್ರದಾಯಿಕ ಡೊಳ್ಳು-ತಾಳಗಳ ನಾದದೊಂದಿಗೆ ರೈತರು ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದ್ದು, ನಗರದಲ್ಲಿ ಗಮನ ಸೆಳೆಯಿತು.

ಪ್ರಮುಖ ಬೇಡಿಕೆಗಳು

ಕೃಷಿ ತಿದ್ದುಪಡಿ ಕಾಯ್ದೆಗಳು ರದ್ದುಪಡಿಸಬೇಕು ಕನಿಷ್ಠ ಬೆಂಬಲ ಬೆಲೆ ()ಗೆ ಕಾನೂನು ಮಾನ್ಯತೆ ನೀಡಬೇಕು ವಿದ್ಯುತ್ ಖಾಸಗೀಕರಣ ಹಾಗೂ ಸ್ಮಾರ್ಟ್ ಮೀಟರ್ ಯೋಜನೆ ಕೈಬಿಡಬೇಕು ಭೂ ಸುಧಾರಣೆ ತಿದ್ದುಪಡಿ ಕಾಯ್ದೆ ಹಿಂಪಡೆಯಬೇಕು ಸರ್ಕಾರಿ ಭೂಮಿಯನ್ನು ಸಾಗುವಳಿದಾರರಿಗೆ ಹಂಚಿಕೆ ಮಾಡಬೇಕು ಹೋರಾಟ ತೀವ್ರಗೊಳಿಸುವ ಎಚ್ಚರಿಕೆ ಸಭೆಯ ಅಂತ್ಯದಲ್ಲಿ ರೈತ ಹಾಗೂ ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಗಳಿಗೆ ಸ್ಪಂದನೆ ಸಿಗದಿದ್ದಲ್ಲಿ ರಾಜ್ಯಾದ್ಯಂತ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಡಾ. ಎಂ. ನಾಗಪ್ಪ ಅವರ 15ನೇ ಪುಣ್ಯಸ್ಮರಣಾರ್ಥ ಸಂಗೀತ ಕಾರ್ಯಕ್ರಮ ಯಶಸ್ವಿ



ಕಲ್ಯಾಣ ಸಂಜೆ ಸುದ್ದಿ

ರಾಯಚೂರು, ಮಾ.30-

ಚಿದಾನಂದ್ ನುಲಿ ಅವರ ತಂಡ ಹಾಗೂ ವಚನಸಿರಿ ಪಂ. ಅಂಬಯ್ಯ ನುಲಿ ಸಂಗೀತ ಸಂಸ್ಕೃತಿ ಸಂಸ್ಥೆಯ ಆಶ್ರಯದಲ್ಲಿ, ಡಾ. ಎಂ. ನಾಗಪ್ಪ (ವಕೀಲರು) ಅವರ 15ನೇ ಪುಣ್ಯಸ್ಮರಣಾರ್ಥ ವಿಶೇಷ ಸಂಗೀತ ಕಾರ್ಯಕ್ರಮವು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ರವಿವಾರ ಭಕ್ತಿಭಾವದಿಂದ ಜರಗಿತು.

ಕಾರ್ಯಕ್ರಮದಲ್ಲಿ ನುಲಿ ಸಂಗೀತ ಪರಂಪರೆಯ ವೈಶಿಷ್ಟ್ಯತೆಗಳನ್ನು ಒಳಗೊಂಡ ಭಕ್ತಿಗೀತೆಗಳು, ವಚನಗಾನ ಹಾಗೂ ಸಾಂಸ್ಕೃತಿಕ ಸಂಗೀತವನ್ನು ಕಲಾವಿದರು ಮನಮುಟ್ಟುವಂತೆ ಸಿದರು. ಚಿದಾನಂದ್ ನುಲಿ ಅವರ ನೇತೃತ್ವದ ತಂಡವು ನೀಡಿದ ಸಂಗೀತ ಪ್ರದರ್ಶನವು ಸಂಗೀತಾಸಕ್ತರ ಮನಸೆಳೆಯಿತು.

ಈ ಸಂದರ್ಭದಲ್ಲಿ ಹಲವಾರು ಗಣ್ಯರು, ಸಂಗೀತಾಭಿಮಾನಿಗಳು ಹಾಗೂ ಡಾ. ನಾಗಪ್ಪ ಅವರ ಅಭಿಮಾನಿಗಳು ಭಾಗವಹಿಸಿ, ಅವರ ಸೇವೆಗಳನ್ನು ಸ್ಮರಿಸಿದರು. ಕಾರ್ಯಕ್ರಮವು ಸಾಂಸ್ಕೃತಿಕ ಮೌಲ್ಯಗಳನ್ನು ಉತ್ತೇಜಿಸುವ ಮೂಲಕ ಸಾರ್ಥಕಗೊಂಡಿತು

ಅಪರಾಧಗಳನ್ನು ತಡೆಗಟ್ಟಲು ಸಿ ಸಿ ಕ್ಯಾಮರಾಗಳ ಅಡವಳಿಕೆಯಿಂದ ಸಾಧ್ಯ. ಎಸ್‌ಪಿ ಅರುಣಾಂಶುಗಿರಿ

ಸಿಂಧನೂರು,ಮಾ.30-

ದಿನಾಂಕ: 29-3-2026. ರಂದು. 2024 25 ನೇ ಸಾಲಿನ. ಕೆ ಕೆ ಆರ್ ಡಿ ಬಿ. ಮ್ಯಾಕ್ರೋ ಯೋಜನೆ ಅಡಿಯಲ್ಲಿ. ಸಿಂಧನೂರು ನಗರ ವ್ಯಾಪ್ತಿಯಲ್ಲಿ. ವಾರ್ಡ್ ನಂಬರ್ 1ರಿಂದ 31 ವಾರ್ಡ್ ಗಳಲ್ಲಿ. ಸಿ ಸಿ. ಕ್ಯಾಮೆರಾ ಹಾಗೂ ಪೊಲೀಸ್ ವಸತಿ ಗ್ರಹಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಸಿಂಧನೂರು ನಗರದಲ್ಲಿ ನೂತನ ತಂತ್ರಜ್ಞಾನದಿಂದ. ಎ ಐ. ಕ್ಯಾಮರಾ ಸೇರಿ. 101 ಸಿಸಿ ಕ್ಯಾಮೆರಾ. ಅಳವಡಿಕೆ ಮಾಡಲಾಗಿದೆ. ಇದರಿಂದ ಅಪರಾಧ ತಡೆಗಟ್ಟಲು ತುಂಬಾ ಅನುಕೂಲವಾಗಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ. ಅರುಣಾಂಶುಗಿರಿ. ಹೇಳಿದರು.



ರವಿವಾರ ಸಿಂಧನೂರು ನಗರದ ಪೊಲೀಸ್ ವಸತಿಗೃಹ ಅವರಣದಲ್ಲಿ. ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ ಅಡಿಯಲ್ಲಿ ನಿರ್ಮಾಣಗೊಂಡ. 12. ಪೊಲೀಸ್ ವಸತಿ ಗ್ರಹಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಾಸಕರ ಅನುದಾನದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ಸಿಂಧನೂರು ನಗರ ಸಂಪೂರ್ಣ ಕವರ್ ಆಗಲಿದೆ ಪ್ರತಿಯೊಂದು ವಾಹನಗಳ ಸಂಖ್ಯೆ ನಮೋದಿಸಿದರೆ ಸಾಕು. ನಗರದಲ್ಲಿ ಎಲ್ಲೆಲ್ಲಿ ಓಡಾಡಿದೆ ಎಂದು ಪತ್ತೆ ಹಚ್ಚಬಹುದು. ಇದರಿಂದ ಅಪರಾಧಗಳ ನಿ ಯ ಂ ೦ ತ ್ರ ಣ ಸಾಧ್ಯವಾಗಬಹುದು. ಎಂದು ಅವರು ಅಭಿಪ್ರಾಯ ಪಟ್ಟರು. ಪೊಲೀಸರಿಗೆ ಸುಸಜ್ಜಿತವಾದ ವಸತಿ ಗ್ರಹಗಳ ನಿರ್ಮಾಣದಿಂದ. ತುಂಬಾ ಅನುಕೂಲ ವಾಗಲಿದೆ ಪೊಲೀಸ್ ಇಲಾಖೆ ಒಳ್ಳೆ ರೀತಿ ಕೆಲಸ ಮಾಡಲು ಇಲಾಖೆಗೆ ಬೇಕಿರುವ ಕೆಲವೊಂದು ಬೇಡಿಕೆಗಳನ್ನು ಶಾಸಕರ ಗಮನಕ್ಕೆ ತರಲಾಗುವುದು ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ. ಶಾಸಕ ಹಂಪನಗೌಡ ಬಾದರ್ಲಿ

ಮೂರನೇಯ ಪುಟಕ್ಕೆ

ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ : ಯತೀಂದ್ರ ಸಿದ್ದರಾಮಯ್ಯ ಭವಿಷ್ಯ



ಲಿಂಗಸುಗೂರು,ಮಾ.29-

ರಾಜ್ಯದಲ್ಲಿ ನಡೆಯುವ ಎರಡು ಉಪಚುನಾವಣೆಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬಹುಮತ ದೊಂದಿಗೆ ವಿಜಯ ಸಾಧಿಸಲಿದೆ ಎಂದು ಎಂ ಶಾಸಕ ಯತೀಂದ್ರ ಸಿದ್ದರಾಮಯ್ಯ ಭವಿಷ್ಯ ನುಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆಯಲ್ಲಿನ ಬಂಡಾಯವನ್ನು ಸಿಎಂ ಸಿದ್ದರಾಮಯ್ಯನವರು ನೇತೃತ್ವದಲ್ಲಿ ಬಂಡಾಯ ಅಭ್ಯರ್ಥಿ ಪೈಲ್ವಾನ್ ಅವರ ಜೊತೆ ಮಾತು ಕತೆ ನಡೆಸಿದ್ದಾರೆ. ಹೀಗಾಗಲೇ ಅವರು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಪರವಾಗಿ ಚುನಾವಣೆ ಪ್ರಚಾರದಲ್ಲಿ ತೊಡಗಿದ್ದಾರೆ. ವಿಜಯ ನಮ್ಮದೇ ಎಂದು ಭರವಸೆ ವ್ಯಕ್ತಪಡಿಸಿದರು.

ಅದೇ ರೀತಿಯಾಗಿ ಬಾಗಲಕೋಟೆಯಲ್ಲೂ ಮೇಟಿ ಕುಟುಂಬದ ಅಸಮಾಧಾನವನ್ನು ಅಪ್ಪಾಜಿಯವರು ಬಗೆಹರಿಸಿದ್ದಾರೆ.ಸ್ಥಳೀಯ ನಾಯಕರು ಹೀಗಾಗಲೇ ಭರ್ಜರಿ ಪ್ರಚಾರದಲ್ಲಿ ತೊಡಗಿದ್ದಾರೆ. ಇಲ್ಲಿಯೂ ಕೂಡಾ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರು ಭರ್ಜರಿ ಜಯ ಪಡೆಯುತ್ತಾರೆ. ನಾನು ಇವತ್ತು ಬಾದಾಮಿಯಲ್ಲಿ ಪ್ರಚಾರಕ್ಕೆ ತೆರಳುತ್ತಿದ್ದೇನೆ ಎಂದರು.

ಸಿಎಂ ಸಿದ್ದರಾಮಯ್ಯನವರ ಬಗ್ಗೆ ಉತ್ತರ ಕರ್ನಾಟಕದ ಜನತೆ ಪ್ರೀತಿ ವಿಶ್ವಾಸ ಇಟ್ಟಿದ್ದಾರೆ. ಜೊತೆಗೆ ನನಗೂ ಕೂಡಾ ಅದೇ ಪ್ರೀತಿ ವಿಶ್ವಾಸ ತೋರುತ್ತಿದ್ದಾರೆ.ಮತ್ತು ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆ ಉದ್ಘಾಟನೆ, ಮುದಗಲ್ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಸಮಸ್ಯೆಯನ್ನು ಸಿಎಂ ಗಮನಕ್ಕೆ ತಂದು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ ಎಂದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತೆ, ಎಲ್ಲಾ ನಾಯಕರು ಒಗ್ಗಟ್ಟಿನಿಂದ ಚುನಾವಣೆ ಪ್ರಚಾರ ಮಾಡಿ ಎರಡು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ ಎಂದು

ಮೂರನೇಯ ಪುಟಕ್ಕೆ

ಬಸವಣ್ಣನವರ ವಿಚಾರ ಮನ- ಮನೆಗೆ ತಲುಪಲಿ



ಔರಾದ್,ಮಾ.30-

ತಾಲ್ಲೂಕಿನ ಲಾಧಾ ಗ್ರಾಮದಲ್ಲಿ ಒಂದೇ ಕಲ್ಲಿನಲ್ಲಿ ಕೆತ್ತಲಾದ ಮೂರುವರೆ ಅಡಿ ಎತ್ತರದ ಆಕರ್ಷಕ ಬಸವೇಶ್ವರ ಪ್ರತಿಮೆಯನ್ನು ಭಾನುವಾರ ಲೋಕಾರ್ಪಣೆ ಮಾಡಲಾಯಿತು.

ಸುಮಾರು ₹15 ಲಕ್ಷ ವೆಚ್ಚದಲ್ಲಿ ಅಭಯ ಹಸ್ತ ಭಂಗಿಯಲ್ಲಿ ನಿರ್ಮಿಸಲಾದ ಈ ಪ್ರತಿಮೆ ಬಸವಭಕ್ತರಲ್ಲಿ ಹರ್ಷ ತಂದಿದೆ.

ಭೈಲೂರು ಮಠದ ನಿಜಗುಣಾನಂದ ಸ್ವಾಮೀಜಿ ನೂತನ ಬಸವೇಶ್ವರ ಪ್ರತಿಮೆಗೆ ಮೆಚ್ಚುಗೆ ವ್ಯಕ್ತಪಡಿಸಿ, ಇದರಿಂದ ಬಸವಣ್ಣನವರ ವಿಚಾರ ಧಾರೆ ಮುಂದಿನ ಪೀಳಿಗೆಗೆ ತಲುಪಲಿದೆ. ಜಗತ್ತಿನಲ್ಲಿ ಶ್ರೇಷ್ಠವಾದ ಬಸವ ಪರಂಪರೆ ಧರ್ಮವನ್ನು ಉಳಿಸಲು ನಾವೆಲ್ಲ ಸಂಕಲ್ಪ ಮಾಡಬೇಕು ಎಂದರು.

ಬಸವೇಶ್ವರ ಪ್ರತಿಮೆ ಉದ್ಘಾಟಿಸಿದ ಶಾಸಕ ಪ್ರಭು ಚವಾಣ್, ಬಸವಣ್ಣನವರ ವಿಚಾರಧಾರ ವಿಶ್ವ ಮಟ್ಟದಲ್ಲಿ ಪ್ರಚುರಪಡಿಸುವ ಉದ್ದೇಶದಿಂದ ಬಸವಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಲು ತಾವು ಸಚಿವರಾಗಿದ್ದಾಗ ಸಲ್ಲಿಸಿದ ಪ್ರಸ್ತಾವನೆಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಿದ್ದರು. ಅದರ ಫಲವಾಗಿ ಇಂದು ಕಲ್ಯಾಣದಲ್ಲಿ ಅನುಭವ ಮಂಪಟ ಕಾಮಗಾರಿ ಅಂತಿಮ ಹಂತದಲ್ಲಿದೆ ಎಂದು ಹೇಳಿದರು.

ಬೀದರ್ ರಂಗ ಮಂದಿರಕ್ಕೆ ಲಿಂ. ಚನ್ನಬಸವ ಪಟ್ಟದ್ದೇವರ ಹೆಸರು ಹಾಗೂ ಔರದ್ ಕ್ಷೇತ್ರದ ಸಂತಪೂರ ಸೇರಿದಂತೆ ಅನೇಕ ಕಡೆ ಬಸವಣ್ಣನವರ ಪ್ರತಿಮೆ ಸ್ಥಾಪಿಸಿ ಈ ಮೂಲಕ ಜನರಲ್ಲಿ ಬಸವ ಪ್ರಜ್ಞೆ ಬೆಳೆಸಲಾಗುತ್ತಿದೆ ಎಂದು ಹೇಳಿದರು.

ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಬಸವಣ್ಣ ಹೆಸರಿನಲ್ಲಿ ಅಗಾಧವಾದ ಶಕ್ತಿ ಇದೆ. ಅವರ ವಚನಗಳು ಪಠಿಸಿ ಜೀವನ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಲೋಕಸಭಾ ಸದಸ್ಯ ಸಾಗರ ಖಂಡ್ರೆ ಮಾತನಾಡಿ, ಬಸವಣ್ಣನವರ ವಚನಗಳನ್ನು ಎಲ್ಲರೂ ಓದಬೇಕು. ಅವರ ತತ್ವಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನುಡಿದಂತೆ ನಡೆಯುವ ಶರಣರ ವಾಣಿಯಂತೆ ನಾವು ಬದುಕಬೇಕು ಎಂದರು.

ಅಕ್ಕ ಗಂಗಾಂಬಿಕೆ ತಾಯಿ, ಹುಲಸೂರು ಶಿವಾನಂದ ಸಾಮೀಜಿ, ಸಾಯಿಗಾಂವ ಸ್ವಾಮೀಜಿ, ಗುರುಬಸವ ಪಟ್ಟದ್ದೇವರ ಸಮ್ಮುಖದಲ್ಲಿ ಪ್ರತಿಮೆ ಅನಾವರಣ ನಡೆಯಿತು.

ತಹಶೀಲ್ದಾರ್ ಮಹೇಶ ಪಾಟೀಲ, ಮುಖಂಡ ಬಸವರಾಜ ಧನ್ನೂರ, ಅಲ್ಲಮಪ್ರಭು, ಕಸಾಪ ಜಿಲ್ಲಾಧ್ಯಕ್ಷರಾದ ಸುರೇಶ ಚನ್ನಶೆಟ್ಟಿ, ಶಿವಶಂಕರ ಟೋಕರೆ, ಶಿವಕುಮಾರ ಘಾಟೆ, ವಿಜಯಕುಮಾರ ಪಾಟೀಲ, ಮಹಾದೇವ ಮಿಠಾರೆ, ನಾಗಪ್ಪ ಮುಸ್ತಾಪೂರ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಧನರಾಜ ಮುಸ್ತಾಪುರ, ಮಲ್ಲಿಕಾರ್ಜುನ ಹಿಪ್ಪಳಗಾವೆ, ಶರಣಪ್ಪ ಕಾರಮುಂಗಿ, ಪ್ರದೀಪ ಮಿಠಾರೆ, ಮಾರುತಿ ಗಾದಗೆ, ವೈಜಿನಾಥ ಸಜ್ಜನಶೆಟ್ಟಿ ಉಪಸ್ಥಿತರಿದ್ದರು.

ಪ್ರತಿಮೆ ಅನಾವರಣ ಮೊದಲು ಗ್ರಾಮದಲ್ಲಿ ಬಸವೇಶ್ವರ ಭಾವಚಿತ್ರ ಹಾಗೂ ವಚನ ಸಾಹಿತ್ಯದ ಭವ್ಯ ಮೆರವಣಿಗೆ ನಡೆಯಿತು. ಮಹಿಳೆಯರು ವಚನ ಪುಸ್ತಕ ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು. ಸುತ್ತಲಿನ ಹತ್ತಾರು ಗ್ರಾಮಗಳ ಬಸವ ಭಕ್ತರು ಪಾಲ್ಗೊಂಡು ಸಂಭ್ರಮಿಸಿದರು.

ಜ್ಯೋತಿಬಾ ಪುಲೆ ಹೆಣ್ಣನ್ನು ಶಿಕ್ಷಕಿಯನ್ನಾಗಿಸಿ ಹೊಸ ದಾರಿ ತೋರಿದರು: ಡಾ.ಕಾವ್ಯಾಶ್ರೀ ಅಭಿಪ್ರಾಯ



ಕಲಬುರಗಿ,ಮಾ.30-

ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಗೆ ಶಿಕ್ಷೆ ನೀಡುತ್ತಿದ್ದ ಕಾಲದಲ್ಲಿ ಮಹಾತ್ಮ ಜ್ಯೋತಿಬಾ ಪುಲೆ ಅವರು ಹೆಣ್ಣನ್ನು ಶಿಕ್ಷಕಿಯನ್ನಾಗಿಸಿ ಹೊಸ ದಾರಿಯನ್ನು ತೋರಿಸಿದರು. ಅವರ ಪ್ರಯತ್ನದಿಂದಲೇ ಸಾವಿತ್ರಿಬಾಯಿ ಪುಲೆ ಭಾರತದ ಮೊದಲ ಮಹಿಳಾ ಶಿಕ್ಷಕಿಯಾಗಿ ಹೊರಹೊಮ್ಮಿದರು'' ಎಂದು ಲೇಖಕಿ ಡಾ.ಕಾವ್ಯಾಶ್ರೀ ಮಾಗಾಂವಕರ್ ಹೇಳಿದರು.

ನಗರದ ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ.ಅಂಬೇಡ್ಕರ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಮಹಿಳಾ ವಿಶೇಷ ಘಟಕ ಆಯೋಜಿಸಿದ್ದ ಮಹಿಳಾ ದಿನಾಚರಣೆಯ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳಾ ಸಬಲೀಕರಣದ ಇತಿಹಾಸವನ್ನು ವಿವರಿಸಿದ ಅವರು, ಗೌತಮ ಬುದ್ಧರಿಂದ ಆರಂಭವಾಗಿ ಬಸವಣ್ಣ ಹಾಗೂ ಆಧುನಿಕ ಯುಗದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಟ ನಡೆಸಿದ್ದಾರೆ ಎಂದು ಹೇಳಿದರು. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಶಿಕ್ಷಣ ಪಡೆದು ಉದ್ಯೋಗದಾತರಾಗಿರುವುದಕ್ಕೆ ಇವರೇ ಕಾರಣರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮಹಿಳಾ ಘಟಕದ ಸಂಚಾಲಕರಾದ ಡಾ.ನಿರ್ಮಲಾ ಶಿರಗಾಪುರ, ಮಹಿಳೆಯರು ಸಮಾನತೆಯಿಂದ ಬದುಕಲು ಸಂವಿಧಾನ ನೀಡಿದ ಹಕ್ಕುಗಳಿಗೆ ಡಾ.ಅಂಬೇಡ್ಕರ್ ಅವರೇ ಕಾರಣ. ದೇಶದ ಮಹಿಳೆಯರು ಅವರಿಗೆ ಸದಾ ಋಣಿಯಾಗಿರಬೇಕು'' ಎಂದರು.

ಕೆ.ಪಿ.ಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಾಂತಪ್ಪ ಸೂರನ್ ಅವರು ಕುಟುಂಬದಲ್ಲಿ ಮಹಿಳಾ ಸಮಾನತೆಯನ್ನು ಹೇಗೆ ಅನುಸರಿಸಬೇಕು ಎಂಬುದನ್ನು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿದ್ದಪ್ಪ ಎಸ್.ಕಾಂತ ಅವರು ಮಹಿಳಾ ಪರ ವಚನಗಳನ್ನು ವಾಚಿಸಿ ವಿವರಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಡಾ. ಸಿದ್ದಪ್ಪ ಎಸ್. ಕಾಂತ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕರಾದ ಡಾ. ಸಿದ್ದಾರ್ಥ ಮದನಕರ್ ಸೇರಿದಂತೆ ಪ್ರಾಧ್ಯಾಪಕರಾದ ರತಿ ರೇವೂರ, ಶಿಲ್ಪ ಎಲ್, ಮಂಜುಳ ಕೆ, ಆರ್. ಸುಮ, ಕೌಶಲ್ಯ, ಅಂಜುಮನ, ಡಾ.ಸುದರ್ಶನ ಮದನರ್ಕ,ರ್ ಡಾ. ಅರುಣ್ ಜೋಳದ ಕೂಡ್ಲಿಗಿ, ಡಾ. ವಸಂತ ನಾಶಿ, ಡಾ.ದತ್ತುರಾಯ ಶಿವರಾಜ, ಡಾ. ಶಿವಕುಮಾ,ರ್ ಡಾ. ಸುರೇಶ್ ಕುಲಕರ್ಣಿ, ಡಾ. ಅರುಣ್ ಕುಮಾರ್ ಹಾಗೂ ಗ್ರಂಥಪಾಲಕರಾದ ಡಾ.ರಮೇಶ್ ಜಾಬನೂರು ಉಪಸ್ಥಿತರಿದ್ದರು.

ಹರಪನಹಳ್ಳಿ: 25 ಗ್ರಾಮಗಳಲ್ಲಿ ನೀರಿಗಾಗಿ ಹಾಹಾಕಾರ



ಹರಪನಹಳ್ಳಿ, ಮಾ.30-

2008ರಿಂದ 2023ರ ವರೆಗೆ ತಾಲ್ಲೂಕಿನಲ್ಲಿ ರಾಜೀವ್‌ಗಾಂಧಿ ಸಬ್ ಮಿಷನ್, ಮನೆ-ಮನೆಗೆ ನಳ ಕಲ್ಪಿಸುವ ಜಲಜೀವನ್ ಮಿಷನ್ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಕಾರ್ಯಕ್ರಮ ಹೀಗೆ ಸಾಲು ಸಾಲು ಯೋಜನೆಗಳು ಕುಡಿಯುವ ನೀರಿಗಾಗಿ ಮಂಜೂರಾಗಿ ಅನುಷ್ಠಾನಗೊಂಡಿವೆ. ಆದರೆ ಅವುಗಳು ಆಮೆಗತಿಯಲ್ಲಿ ಸಾಗಿದ್ದು, ಯೋಜನೆಗಳಿಗೆ ಇನ್ನೂ ಪೂರ್ಣ ಪ್ರಮಾಣದ ಚಾಲನೆ ದೊರತಿಲ್ಲ. ಕೆಲವೆಡೆ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಬಿಸಿಲಿನ ಝಳ ಹೆಚ್ಚಾದಂತೆ ನೀರಿನ ಬವಣೆ ಬಿಗಡಾಯಿಸುತ್ತಿದೆ.

ಇತ್ತೀಚೆಗಷ್ಟೇ ಕಣಿವಿಹಳ್ಳಿ ಗ್ರಾಮದ ಗುಡ್ಡಗಾಡು ಪ್ರದೇಶದಲ್ಲಿ ವಾಸವಿರುವ ಕುಟುಂಬಗಳಿಗೆ ಕುಡಿಯುವ ನೀರು ಪೂರೈಸದ ಕಾರಣ, ರೊಚ್ಚಿಗೆದ್ದ ಗ್ರಾಮಸ್ಥರು ಪಂಚಾಯಿತಿ ಸಿಬ್ಬಂದಿಯೊಂದಿಗೆ ತೀವ್ರ ವಾಗ್ವಾದಕ್ಕಿಳಿದಿದ್ದರು. ಅರಸೀಕೆರೆ ಹೋಬಳಿ ವ್ಯಾಪ್ತಿಯ ಅರಸೀಕೆರೆ, ಚಟ್ನಿಹಳ್ಳಿ, ಹಗರಿ ಗುಡಿಹಳ್ಳಿ, ಎನ್.ಶೀರನಹಳ್ಳಿ ಹಾಗೂ ನಜೀರ್ ನಗರದಲ್ಲೂ ಇದೇ ರೀತಿಯ ಕುಡಿಯುವ ನೀರಿನ ಪರದಾಟ ಶುರುವಾಗಿದೆ.

ನೀಲಗುಂದ, ಮಾಚಿಹಳ್ಳಿ ಕೊರಚರಹಟ್ಟಿ, ಮಾಚಿಹಳ್ಳಿ ತಾಂಡ, ಗುರುಶಾಂತನಹಳ್ಳಿ, ಕ್ಯಾರಕಟ್ಟಿ, ವ್ಯಾಸನ ತಾಂಡ, ಅಣಜಿಗೇರಿ, ಹನುಮನಹಳ್ಳಿ, ಎನ್ ಶೀರನಹಳ್ಳಿ, ಪಾವನಪುರ, ಮೈದೂರು, ಬಾಗಳಿ, ಚಿಗಟೇರಿ ಎಲ್ಲಾ ಸೇರಿ ಒಟ್ಟು 13 ಗ್ರಾಮಗಳಲ್ಲಿ 17 ಕೊಳವೆ ಬಾವಿಗಳ ರೈತರಿಂದ ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ.

ಜಲಕಂಟಕ ಎದುರಾಗಲಿರುವ ಗ್ರಾಮಗಳು: ಉಚ್ಚಂಗಿದುರ್ಗ, ಕಸವನಹಳ್ಳಿ, ಜೋಷಿಲಿಂಗಾಪುರ, ಕೊರಚರಹಟ್ಟಿ, ಪಾವನಪುರ, ಅರಸೀಕೆರೆ, ತಾಳೇದಹಳ್ಳಿ. ಮಾಚಿಹಳ್ಳಿ ಕೊಂಗನ ಹೊಸೂರು, ಪುಣಭಘಟ್ಟ ತಾಂಡ, ತೌಡೂರು ತಾಂಡ, ಕಂಚಿಕೇರಿ, ನಂದಿಬೇವೂರು, ನಂದಿಬೇವೂರು ತಾಂಡ, ಚಿಗಟೇರಿ, ಮತ್ತಿಹಳ್ಳಿ, ಸಾಸ್ವಿಹಳ್ಳಿ, ಹುಣಸಿಕಟ್ಟಿ, ಹಾರಕನಾಳು ಸಣ್ಣ ತಾಂಡ, ದೊಡ್ಡ ತಾಂಡ, ಕೆ ಕಲ್ಲಹಳ್ಳಿ, ಈಶಾಪುರ, ಹಾರಕನಾಳು, ಚೆನ್ನಹಳ್ಳಿ, ಇಟ್ಟಿಗುಡಿ, ಮಾದಿಹಳ್ಳಿ, ಅರಸನಾಳು, ತಾವರಗೊಂದಿ, ಲೋಲೇಶ್ವರ, ಕುಂಚೂರು, ಹಲವಾಗಲು ವ್ಯಾಪ್ತಿಯಲ್ಲಿ ಏಪ್ರಿಲ್ ತಿಂಗಳಾಂತ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

2ನೇ ಹಂತದ ಯೋಜನೆಯತ್ತ ನಗರಸಭೆ ದೃಷ್ಟಿ

ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರಿ ವೇಗವಾಗಿ ಬೆಳೆಯುತ್ತಿರುವ ಹರಪನಹಳ್ಳಿ ನಗರದಲ್ಲಿ ಈಗ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಜನಸಂಖ್ಯೆ 70 ಸಾವಿರದ ಗಡಿ ದಾಟಿದ್ದರೂ, ಹಳೆಯ ಪೈಪ್‌ಲೈನ್‌ಗಳ ಸವಾಲಿನಿಂದಾಗಿ ನೀರಿನ ಸಮರ್ಪಕ ಪೂರೈಕೆ ಕಷ್ಟಸಾಧ್ಯವಾಗಿದೆ.

ಶಿಥಿಲಗೊಂಡ ಪೈಪ್‌ಲೈನ್: ಗರ್ಭಗುಡಿ ಗ್ರಾಮದಿಂದ ನಗರಕ್ಕೆ ನೀರು ತರುವ ಪೈಪ್‌ಲೈನ್‌ಗಳು ಸಂಪೂರ್ಣ ಶಿಥಿಲಗೊಂಡಿವೆ. ಪದೇ ಪದೇ ಪೈಪ್‌ಲೈನ್ ಒಡೆಯುತ್ತಿರುವುದರಿಂದ ಅಧಿಕಾರಿಗಳು ದುರಸ್ತಿ ಕಾರ್ಯ ಮಾಡಿಯೇ ಬೇಸತ್ತು ಹೋಗಿದ್ದಾರೆ. ತುಂಗಭದ್ರಾ ನದಿಯಿಂದ ನೀರು ಪೂರೈಕೆಯಾಗುತ್ತಿದ್ದರೂ, ಈಗಿರುವ ಮೂಲಸೌಕರ್ಯ ಹೆಚ್ಚುತ್ತಿರುವ ಜನಸಂಖ್ಯೆಯ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿಲ್ಲ. ಹಳೆಯ ಪೈಪ್‌ಲೈನ್‌ಗಳನ್ನು ಪದೇ ಪದೇ ರಿಪೇರಿ ಮಾಡುವ ಬದಲು, ಸರ್ಕಾರದಿಂದ ಈಗಾಗಲೇ ಮಂಜೂರಾಗಿರುವ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಶೀಘ್ರವಾಗಿ ಅನುಷ್ಠಾನಕ್ಕೆ ತರಲು ಅಧಿಕಾರಿಗಳು ಸಜ್ಜಾಗಿದ್ದಾರೆ. ಈ ಯೋಜನೆ ಜಾರಿಯಾದರೆ ನಗರದ ಎಲ್ಲ ವಾರ್ಡ್ ಜನತೆಗೆ ಶಾಶ್ವತವಾಗಿ ನೀರಿನ ಸೌಲಭ್ಯ ಸಿಗಲಿದೆ ಎಂಬ ನಿರೀಕ್ಷೆಯಿದೆ.



ಜಮೀನು ಖರೀದಿ: ಏಕರೂಪ ದರಕ್ಕೆ ಆಗ್ರಹ

ದೇವರಹಿಪ್ಪರಗಿ,ಮಾ.30-

ಜಾಲವಾದ ಗ್ರಾಮದ ರೈತರ ಜಮೀನುಗಳಿಗೆ ಏಕದರ ನಿಗದಿ ಮಾಡಿ ಖರೀದಿಸುವಂತೆ ಆಗ್ರಹಿಸಿ ರೈತರ ಸಂಘ ಹಾಗೂ ಡಿಎಸ್‌ಎಸ್ ಪದಾಧಿಕಾರಿಗಳು ಪ್ರತಿಭಟನೆ ಕೈಗೊಂಡರು.

ಗ್ರಾಮದ ರೈತರ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಉತ್ತರ ಕರ್ನಾಟಕ ರೈತರ ಸಂಘದ ರಾಜ್ಯಾಧ್ಯಕ್ಷ ಶಂಕರಗೌಡ ಹಿರೇಗೌಡ ಮಾತನಾಡಿ, ಜಾಲವಾದ ಗ್ರಾಮದಲ್ಲಿ ಹರಿಯಾಣ ಮೂಲದ ಆರ್‌ಇಜೆಡ್ ಟ್ರಾನ್ಸ ಮಿಷನ್ ಸೋಲಾರ್ ಪಾರ್ಕ್ ಲಿಮಿಟೆಡ್ ಕಾರ್ಪೋರೇಟ್ ಕಂಪನಿಯು ರೈತರಿಗೆ ನಿಗದಿತ ಏಕರೂಪದ ಬೆಲೆ ನೀಡದೆ ವಂಚಿಸಿದೆ. ಈ ಕಂಪನಿಯು ತನ್ನ ನೀತಿಗಳಿಗೆ ಅನುಗುಣವಾಗಿ ನಿಗದಿತ ಅರ್ಹತಾ ಮಾನದಂಡಗಳಿಗೆ ಒಳಗೊಂಡಂತೆ ಕರ್ನಾಟಕ ರಾಜ್ಯದಲ್ಲಿ ಬಿಆರ್‌ಐಜೆ ಯೋಜನೆಗೆ ರೈತರ ಭೂಮಿ ಖರೀದಿಸಿ ಸ್ಥಳೀಯ ನಿರಾಶ್ರಿತರಿಗೆ ಪ್ರತಿಯೊಂದು ಕುಟುಂಬಕ್ಕೆ ತಮ್ಮ ಕಂಪನಿಯಲ್ಲಿ ಉದ್ಯೋಗ ನೀಡುವುದಾಗಿ ಹೇಳಿ ಸರ್ಕಾರಿ ನಿಯಮಗಳ ಪ್ರಕಾರ ದೃಢಪಡಿಸಿ, ಈಗ ಸ್ಥಳೀಯ ರೈತರಿಗೆ ಅನ್ಯಾಯ ಮಾಡಿದೆ ಎಂದು ಹೇಳಿದರು.

ರಾಜಕೀಯ ಬಲ ಮತ್ತು ಕಾನೂನಿನ ಅರಿವುಳ್ಳ ರೈತರಿಗೆ ಪ್ರತಿ ಎಕರೆಗೆ ₹ 28 ರಿಂದ ₹ 30 ಲಕ್ಷ ಕೊಟ್ಟು ಜಮೀನು ಖರೀದಿಸಿದೆ. ಆದರೆ ಅಮಾಯಕ ರೈತರಿಗೆ ₹ 15 ರಿಂದ ₹16 ಲಕ್ಷಗಳಿಗೆ ಏಜೆಂಟಗಳ ಮೂಲಕ ಭೂಮಿ ಖರೀದಿಸಿ ವಂಚಿಸಿದೆ. ಆದ್ದರಿಂದ ಕೂಡಲೇ ಅಮಾಯಕ ರೈತರಿಗೆ ಪ್ರತಿ ಎಕರೆಗೆ ₹35 ಲಕ್ಷ ಕೊಟ್ಟು ಖರೀದಿಸಬೇಕು. ಒಂದು ವೇಳೆ ಸಮಸ್ಯೆ ಬಗೆಹರಿಸದಿದ್ದರೆ ಮುಂದಿನ ದಿನಗಳಲ್ಲಿ ಈ ಹೋರಾಟ ಉಗ್ರ ರೂಪದ ಸ್ವರೂಪ ಪಡೆದುಕೊಳ್ಳುತ್ತದೆ ಎಂದು ಎಚ್ಚರಿಕೆ ನೀಡಿದರು.

ತಾಲ್ಲೂಕು ಘಟಕದ ನೂತನ ಡಿಎಸ್‌ಎಸ್ ಸಂಚಾಲಕ ಸಿದ್ದಾರ್ಥ ರೂಗಿ, ಪಟ್ಟಣ ಪಂಚಾಯಿತಿ ನಾಮ ನಿರ್ದೇಶಿತ ಸದಸ್ಯ ಸುನೀಲ ಕನಮಡಿ, ಶಾಂತಾಬಾಯಿ ನೀರಲಗಿ, ಶಂಕರ ನಾಯ್ಕೋಡಿ, ಪ್ರಕಾಶ ನಾಯ್ಕೋಡಿ, ಅಲ್ಲಾಭಕ್ಷ್ ಇನಾಮದಾರ, ಮಲ್ಲಿಕಾರ್ಜುನ ನಾಯ್ಕೋಡಿ, ಮಾಳಪ್ಪ ನೀರಲಗಿ, ಸಾಯಬಣ್ಣ ಕಣ್ಣಿ, ಮುದಕಪ್ಪ ಮುಳಸಾವಳಗಿ ಇದ್ದರು.

ರಂಗಸೇವೆಗೆ ರಾಜ್ಯ ಮಟ್ಟದ ಗೌರವ: ಸದ್ಯೋಜಾತ ಶಾಸ್ತ್ರಿ ಹಿರೇಮಠ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ



ವಿಜಯನಗರ/ ಹೊಸಪೇಟೆ,ಮಾ.30-

ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಸಮೀಪದ ಜಿ. ನಾಗಲಾಪುರ ಗ್ರಾಮದ ರಂಗಭೂಮಿ ನಟ ಹಾಗೂ ನಿರ್ದೇಶಕ ಶ್ರೀ ಸದ್ಯೋಜಾತ ಶಾಸ್ತ್ರಿ ಹಿರೇಮಠ ಅವರಿಗೆ 2025-26ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಲಭಿಸಿದೆ. ಹೂವಿನಹಡಗಲಿಯ ರಂಗಭಾರತಿ ರಂಗ ಮಂದಿರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗ್ರಾಮೀಣ ಹಿನ್ನೆಲೆಯಿಂದ ಬಂದ ಸದ್ಯೋಜಾತ ಶಾಸ್ತ್ರಿ ಹಿರೇಮಠ ಅವರು ಬಾಲ್ಯದಲ್ಲೇ ರಂಗಭೂಮಿಯತ್ತ ಆಕರ್ಷಿತರಾಗಿ ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳ ಜೊತೆಗೆ ಬಯಲಾಟಗಳಲ್ಲಿ ಬಾಲ ಕಲಾವಿದರಾಗಿ ತಮ್ಮ ಕಲಾ ಜೀವನ ಆರಂಭಿಸಿದರು. ನಂತರ ಕಾಲೇಜು ದಿನಗಳಲ್ಲಿ ನಾಟಕ ರಚನೆ ಮತ್ತು ನಿರ್ದೇಶನದ ಮೂಲಕ ತಮ್ಮದೇ ಕಲಾ ಬಳಗದೊಂದಿಗೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹತ್ತಾರು ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು.

ಬೆಂಗಳೂರಿನಲ್ಲಿ ಕೈಗಾರಿಕಾ ರಂಗದಲ್ಲಿ ಕಾರ್ಯ ನಿರ್ವಹಿಸುತ್ತಾ ತಮ್ಮ ಕಲಾ ನೈಪುಣ್ಯತೆಯಿಂದ ಹಲವಾರು ಹೊಸ ಕಲಾವಿದರನ್ನು ರೂಪಿಸಿದ ಅವರು, ಐ.ಟಿ.ಐ ಲಲಿತಕಲಾ ಸಂಘದ ನಾಟಕಗಳಲ್ಲಿ ಅಭಿನಯಿ ಸಿ ಗಮನ ಸೆಳೆದಿದ್ದಾರೆ. ಕ್ರಾಂಪ್ಟನ್ ಗ್ರೀನ್ಸ್ ರಂಗತಂಡ ದೊ ಂದಿಗೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಯೋಗರಂಗ ಹಾಗೂ ರಂಗ ನಿರಂತರ ತಂಡಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ವಾಲ್ಟರ್ ಡಿಸೋಜಾ, ಸಿಜಿಕೆ, ನಾಗರಾಜ ಮೂರ್ತಿ, ಸುರೇಶ್ ಆನಗಳ್ಳಿ, ಕೃಷ್ಣಮೂರ್ತಿ ಕವತ್ತಾರ ಮೊದಲಾದ ಖ್ಯಾತ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದಾರೆ.

ವೃತ್ತಿ ನಿಮಿತ್ತ ವಿದೇಶದಲ್ಲಿದ್ದಾಗಲೂ ಅಲ್ಲಿನ ಕನ್ನಡ ಸಂಘಗಳಲ್ಲಿ ನಾಟಕ ಚಟುವಟಿಕೆಗಳಿಗೆ ಉತ್ತೇಜನ ನೀಡಿ, ಬೆಳ್ಳಕ್ಕಿ ಹಿಂಡು ಬೆದರ್ಯಾವೋ, ಗಾಂಪರ ಗುಂಪು, ರಾವಿ ನದಿ ದಂಡೆಯಲ್ಲಿ, ಆಗ್ನಿಶಿಖೆ ಮುಂತಾದ ನಾಟಕಗಳನ್ನು ನಿರ್ದೇಶಿಸಿ ರಂಗಭೂಮಿಗೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಇವರ ಸಾಧನೆಯನ್ನು ಗುರುತಿಸಿದ ಕರ್ನಾಟಕ ನಾಟಕ ಅಕಾಡೆಮಿ, 2025-26ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿಯನ್ನು ಅವರು ತಮ್ಮ ತವರು ಜಿಲ್ಲೆಗಳಾದ ಬಳ್ಳಾರಿ ಮತ್ತು ವಿಜಯನಗರದ ಕಲಾವಿದರಿಗೆ ಹಾಗೂ ಸಹೋದರ ದಿವಂಗತ ಷಡಕ್ಷರ ಶಾಸ್ತ್ರಿ ಅವರಿಗೆ ಅರ್ಪಿಸಿದರು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಂಗಭಾರತಿ ಅಧ್ಯಕ್ಷರಾದ ಶ್ರೀಮತಿ ಎಂ.ಪಿ. ಸುಮಾ ವಿಜಯ, ಎಂ.ಪಿ. ವೀಣಾ ಮಹಾಂತೇಶ್, ನಿರ್ದೇಶಕರಾದ ಪ್ರಭು ಸೊಪ್ಪಿನ್, ನಿವೃತ್ತ ಪ್ರಾಚಾರ್ಯ ಡಾ. ಶಾಂತ ಮೂರ್ತಿ ಕುಲಕರ್ಣಿ, ಹಿರಿಯ ರಂಗ ನಿರ್ದೇ ಶಕ ಮಾ.ಬ. ಸೋಮಣ್ಣ, ವಿಜಯನಗರ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಧುರಚನ್ನ ಶಾಸ್ತ್ರಿ, ಡಾ. ಯತ್ನಳ್ಳಿ ಮಲ್ಲಯ್ಯ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕೆಪಿಎಂಇ ಕಾಯ್ದೆ ಉಲ್ಲಂಘಿಸಿದ 136 ಜನರಿಗೆ 45.80 ಲಕ್ಷ ರೂ.ದಂಡ: ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್



ಕಲಬುರಗಿ,ಮಾ.30-

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ-2007ರ ಉಲ್ಲಂಘನೆ ಆರೋಪದ ಮೇರೆಗೆ ಜಿಲ್ಲೆಯಲ್ಲಿ ವಿದ್ಯಾರ್ಹತೆ ಇಲ್ಲದೆ ವೈದ್ಯಕೀಯ ಸೇವೆ ನೀಡುತ್ತಿದ್ದ 136 ಜನರಿಗೆ 45.80 ಲಕ್ಷ ರೂ. ದಂಡ ವಿಧಿಸಿ ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಶುಕ್ರವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೆಪಿಎಂಇ ಕಾಯ್ದೆ ಅಡಿಯ ಕುಂದು ಕೊರತೆ ಅಹವಾಲು ಪ್ರಾಧಿಕಾರ ಮತ್ತು ತಾಯಿ ಮರಣ ಮತ್ತು ಶಿಶು ಮರಣ ಕುರಿತು ಆಡಿಟ್ ಸಭೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಕಾಲ-ಕಾಲಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಯ್ದೆ ಉಲ್ಲಂಘನೆ ಮೇರೆಗೆ ಇಲಾಖಾವಾರು ದಾಖಲಿಸಿದ ಪ್ರಕರಣಗಳ ವಿಚಾರಣೆ ನಡೆಸಿದ ಜಿಲ್ಲಾಧಿಕಾರಿಗಳು, ಆಸ್ಪತ್ರೆ, ಕ್ಲಿನಿಕ್, ಮಾಲಕರು, ವ್ಯಸ್ಥಾಪಕರಿಗೆ ದಂಡ ವಿಧಿಸಿ ಆದೇಶಿಸಿದ್ದಾರೆ.

ಇನ್ನು ಜಿಲ್ಲೆಯ ಸಹಾಯಕ ಆಯುಕ್ತರು, ತಾಲೂಕಿನ ತಹಶೀಲ್ದಾರರು, ತಾಲೂಕು ಪಂಚಾಯತ್ ಇಓ, ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು, ಜಿಲ್ಲಾ ಆಯುಷ್ ಅಧಿಕಾರಿಗಳು, ಆರಕ್ಷಕ ನಿರೀಕ್ಷಕರೆಲ್ಲರು ಸೇರಿ ನಿರಂತರ ನಕಲಿ ವೈದ್ಯರ ಆಸ್ಪತ್ರೆ, ಕ್ಲಿನಿಕ್ ಮೇಲೆ ದಾಳಿ ಮಾಡುವಂತೆ ಸೂಚಿಸಿದರು.

ಇನ್ನು ಈ ಹಿಂದೆ ನಡೆದ ಸಭೆಯಲ್ಲಿ ವಿಧಿಸಿದ ದಂಡದ ಮೊತ್ತವನ್ನು ಇದುವರೆಗೆ ಜಮೆ ಮಾಡದ ನಕಲಿ, ವಿದ್ಯಾಹರ್ತೆ ಇಲ್ಲದ ಮತ್ತು ಕೆಪಿಎಂಇ ಕಾಯ್ದೆ ಉಲ್ಲಂಘನೆ ಮಾಡಿರುವ ಆಸ್ಪತ್ರೆ, ಕ್ಲಿನಿಕ್, ಮಾಲಕರು, ವ್ಯಸ್ಥಾಪಕರ ವಿರುದ್ಧ ಕೆಎಲ್ ಆರ್ ಕಾಯ್ದೆಯಡಿ ಆಸ್ತಿ ಜಪ್ತಿ ಮಾಡಿ ನ್ಯಾಯಾಲಯದಲ್ಲಿ ದಾವೆ ಹೂಡುವಂತೆ ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರಿಗೆ ಡಿಸಿ ಸೂಚನೆ ನೀಡಿದರು.

182 ಆಸ್ಪತ್ರೆಗಳ ಮೇಲೆ ದಾಳಿ ಮಾಡಲಾಗಿದ್ದು, ಈ ಪೈಕಿ ಕೇವಲ 46 ಜನರು ಮಾತ್ರ ದಂಡ ಪಾವತಿಸಿದ್ದು, ಇನ್ನುಳಿದ 136 ಜನರು ಬಾಕಿ ಉಳಿಸಿಕೊಂಡಿದ್ದಾರೆ ಎಂಬ ಮಾಹಿತಿಯನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶರಣಬಸಪ್ಪ ಕ್ಯಾತನಾಳ, ಆರ್.ಸಿ.ಎಚ್.ಓ ಡಾ.ಸಿದ್ರಾಮ ಪಾಟೀಲ್, ಜಿಮ್ಸ್ ಆಸ್ಪತ್ರೆಯ ಜಿಲ್ಲಾ ಶಾಸ್ತ್ರಜ್ಞೆ ಡಾ. ಅಸ್ನಾ ರುಕಿಯಾ ರಬಾ ಸೇರಿದಂತೆ ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು, ಜಿಲ್ಲಾ ಮತ್ತು ವಿಭಾಗೀಯ ಸಂಚಾಲಕರು, ವಿವಿಧ ಆಸ್ಪತ್ರೆಯ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು, ಇನ್ನಿತರ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು.

ರಾಜ್ಯದಲ್ಲಿ ಆಟೋ ಎಲ್‌ಪಿಜಿ ಕೊರತೆ ಇಲ್ಲ - ಸ್ಪಷ್ಟನೆ

ಬಳ್ಳಾರಿ,ಮಾ.30-

ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್.ಪಿ.ಜಿ ಸರಬರಾಜು ಮಾಡಲಾಗುತ್ತಿದೆ ಅಲ್ಲದೇ ವಿಶೇಷವಾಗಿ ★ಆಟೋ ಎಲ್.ಪಿ.ಜಿ★.ಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ. ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿ ಂಗ್ ಸ್ಟೇಷನ್‌ಗಳು () ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೇವಲ ಬೆಂಗಳೂರು ನಗರವೊಂದರಲ್ಲೇ 31 ಕೇಂದ್ರಗಳು ಲಭ್ಯವಿವೆ.

ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ () , ಮತ್ತು ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ ರೂ. 77.74 ರ ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ. ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ. ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18,000 ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ. ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆಯಿಲ್ಲದೆ ಎಲ್‌ಪಿಜಿ ಸರಬರಾಜು ಆಗುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ನಿರಂತರವಾಗಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಏ.27, 28ಕ್ಕೆ

ವಿಜಯಪುರ, ಮಾ.30-

ನಗರದ ತಾಲ್ಲೂಕು ಪಂಚಾಯಿತಿ ಸಭಾಭವನದಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ವೈಸಿ.ಮಯೂರ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಮನಸುಗಳೆಲ್ಲ ಒಂದಾಗಿ ನುಡಿ ಜಾತ್ರೆಯನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕ.ಸಾ.ಪ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಂದಗಿ ಕ.ಸಾ.ಪ ತಾಲ್ಲೂಕು ಘಟಕದ ಗೌರವಾಧ್ಯಕ್ಷ ಮಹಾಂತೇಶ ಪಟ್ಟಣಶೆಟ್ಟಿ, ದೇವರಹಿಪ್ಪರಗಿ ತಾಲ್ಲೂಕು ಘಟಕದ ಅಧ್ಯಕ್ಷ ಸಿದ್ದು ಮೇಲಿನಮನಿ, ಆಲಮೇಲ ತಾಲ್ಲೂಕು ಘಟಕದ ಗೌರವ ಕಾರ್ಯದರ್ಶಿ ಅಶೋಕ ಕೊಳಾರಿ, ತಾಲ್ಲೂಕು ಪಂಚಾಯಿತಿ ಇಒ ರಾಮು ಜಿ.ಅಗ್ನಿ, ಆನಂದ ಶಾಬಾದಿ ಇದ್ದರು.

ಒಂದನೇಯ ಪುಟದಿಂದ

ಅಪರಾಧಗಳನ್ನು ತಡೆಗಟ್ಟಲು ಸಿ ಸಿ ಕ್ಯಾಮರಾಗಳ ಅಡವಳಿಕೆಯಿಂದ ಸಾಧ್ಯ. ಎಸ್‌ಪಿ ಅರುಣಾಂಶುಗಿರಿ

ಯವರು ಮಾತನಾಡಿ . ಪೋಲೀಸ್ ಇಲಾಖೆ ಸಮರ್ಪಕ ದಕ್ಷತೆ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕಿದೆ. ಸಮಾಜದಲ್ಲಿ ಒಂದಿಲ್ಲೊಂದು ಘಟನೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆ ಗಟ್ಟುವ ಕೆಲಸ ವಾಗಬೇಕಿದೆ. ಸಮಾಜದಲ್ಲಿ ಶಾಂತಿ ನೆಮ್ಮದಿ ವ್ಯವಸ್ಥಿತವಾಗಿ ಕಾರ್ಯನಿರ್ವಹಣೆ ಅಗತ್ಯವಾಗಿದೆ. ಕಲಬುರ್ಗಿ ವಿಭಾಗದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಸಿಂಧನೂರ್ ಆಗಿದೆ ಜನದಟ್ಟಣೆಗೆ ತಕ್ಕಂತೆ ಪೊಲೀಸ್ ಠಾಣೆಗಳು ಅಧಿಕಾರಿಗಳು ಸಿಬ್ಬಂದಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಠಾಣೆಗಳ ಬದಲಾವಣೆಗಾಗಿ. ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಿದರೆ ಸರಕಾರದಿಂದ ಅನುಮೋದನೆ ಕೊಡುಸುವುದಾಗಿ ಭರವಸೆ ನೀಡಿದರು.

ಬೇರೆ ಬೇರೆ ಜಿಲ್ಲೆಗಳಿಂದ ಗಾಂಜಾ ಮತ್ತು ಇತರೆ ಮಾದಕ ವಸ್ತುಗಳು. ಔಷಧಗಳ ಮೂಲಕ ಸರಬರಾಜು ಆಗುತ್ತಾ ಇದೆ ಎಂಬ ಮಾಹಿತಿ ಇದೆ. ಇದರ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಇಲಾಖೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ವಿಧಾನಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರು ಮಾತನಾಡಿ. ಸಿಂಧನೂರು ತಾಲೂಕಿನಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ಯಾವುದೇ ತರಹದ ಭಯವಿಲ್ಲದೆ ನಡೆಯುತ್ತಿವೆ. ಇತ್ತೀಚಿಗೆ ಬೆಂಗಾಲಿ ಕ್ಯಾಂಪ್ ನಲ್ಲಿ ಡ್ರಗ್ಸ್ ಸೇವಿಸಿ ಕೊಲೆ ಮಾಡಿರುವ ಘಟನೆ ನಡೆದಿದೆ. ಕಾನೂನು ಬಾಹಿರ ಚಟವಟಿಕೆಗಳಿಗೆ. ಕಠಿಣ ಕ್ರಮ ಕೈಗೊಳ್ಳುವ ಮೂಲಕ ಪೊಲೀಸ್ ಇಲಾಖೆ ಕಡಿವಾಣ ಹಾಕಬೇಕಾಗಿದೆ. ಸಿಂಧನೂರು ನಗರದಲ್ಲಿ ಸಿಸಿ ಕ್ಯಾಮೆರಾ ಗಳ ಅಡವಳಿಕೆಯಿಂದ ಅಪರಾಧಗಳನ್ನು ತಡೆಗಟ್ಟಲು ಸಹಕಾರಿ ಯಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ. ಮಸ್ಕಿ ಶಾಸಕರಾದ. ಬಸನಗೌಡ ತುರುವಿಹಾಳ. ಡಿ ವೈ ಎಸ್ ಪಿ. . ಚಂದ್ರಶೇಖರ್. ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ.. ದೊಡ್ಡ ಬಸವರಾಜ. ನರೇಂದ್ರನಾಥ್. ಖಾಜಿ ಮಲಿಕ್ ವಕೀಲರು. ಸೇರಿದಂತೆ. ಪೋಲಿಸ್ ಅಧಿಕಾರಿಗಳು. ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ : ಯತೀಂದ್ರ ಸಿದ್ದರಾಮಯ್ಯ ಭವಿಷ್ಯ

ವಿಸ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರು ಮಾಜಿ ಶಾಸಕ ಡಿ ಎಸ್ ಹೂಲಗೇರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ, ಮುದಕಪ್ಪ (ವಕೀಲರು), ಮಹ ಮ್ಮದ್ ರಫಿ, ಉಮೇಶ್ ಹುನ ಕುಂಟಿ, ಖಾಜಾಹುಸೇನ್ ಪೂಲ ವಾಲೆ, ಬಾಬಾಖಾಜಿ, ಸಂಗಮೇಶ, ಗದ್ದೆನಗೌಡ, ವೆಂಕಟೇಶ್ ರಾಂಪುರ ತಾಂಡ ಸೇರಿದಂತೆ ಹಲವರು ಇದ್ದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 70,000 ಮುಸ್ಲಿಂ ಮತದಾರರಿದ್ದರೂ ಟಿಕೆಟ್ ನೀಡದೆ ವಂಚಿಸಿದ ಕಾಂಗ್ರೆಸ್: ಚಲವಾದಿ



ಆಳಂದ,ಮಾ.30-

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸುಮಾರು 70 ಸಾವಿರ ಮುಸ್ಲಿಂ ಮತದಾರರು ಇದ್ದರೂ ಆಕಾಂಕ್ಷಿ ಅಭ್ಯರ್ಥಿಯಾಗಿದ್ದ ವ್ಯಕ್ತಿಗೆ ಕಾಂಗ್ರೆಸ್ ಟಿಕೆಟ್ ನೀಡದೆ ಮುಸ್ಲಿಂ ಸಮುದಾಯಕ್ಕೆ ವಂಚಿಸಲಾಗಿದೆ ಎಂದು ರಾಜ್ಯ ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಪಟ್ಟಣದ ಎಸ್‌ಆರ್‌ಜಿ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಬಿಜೆಪಿ ಆಳಂದ್ ಮಂಡಲದ ಆಶ್ರಯದಲ್ಲಿ ನಡೆದ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026 ಮಂಡಲ ಮಟ್ಟದ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ ಹಾಗೂ ಮಂಡಲ ಕಾರ್ಯಕಾರಣಿ ಯಲ್ಲಿ ಮಾತನಾಡಿದ ಚಲವಾದಿ ನಾರಾಯಣಸ್ವಾಮಿ, ಬಿಜೆಪಿಯನ್ನು ನಂಬದ ಮುಸಲ್ಮಾನರು ಕಾಂಗ್ರೆಸ್‌ನ್ನು ನಂಬಿದರೆ ಈ ರೀತಿ ದ್ರೋಹ ಮಾಡುತ್ತಿದೆ. ಬಿಜೆಪಿ ಸೂಕ್ತ ವ್ಯಕ್ತಿಗಳು ಬಂದರೆ ಸೂಕ್ತ ಸ್ಥಾನಮಾನ ನೀಡುತ್ತದೆ ಎಂದು ಹೇಳಿದರು.

ಬಿಜೆಪಿಯಲ್ಲಿ ದಲಿತರಿಗೆ ಇನ್ನೂ ಸಾಕಷ್ಟು ಪ್ರೀತಿ ತೋರಬೇಕಾಗಿದೆ ಎಂದು ಒಪ್ಪಿಕೊಂಡ ಚಲವಾದಿ ನಾರಾಯಣಸ್ವಾಮಿ, ಕಾಂಗ್ರೆಸ್ ಪಕ್ಷ ಮುಸಲ್ಮಾನರು ಮತ್ತು ದಲಿತರಿಗೆ ದ್ರೋಹ ಬಗೆದಿರುವುದು ಈಗ ಅವರಿಗೆ ಅರಿವಾಗುತ್ತಿದೆ. ಬಿಜೆಪಿ ಅವರನ್ನು ಸೂಕ್ತ ಪ್ರೀತಿ ಮತ್ತು ವಿಶ್ವಾಸದಿಂದ ಗುರುತಿಸಿ ಸ್ಥಾನಮಾನ ನೀಡುತ್ತದೆ, ಟಿಕೆಟ್ ಕೊಡುತ್ತದೆ ಎಂದು ಹೇಳಿದರು.

ದೇಶದಲ್ಲಿ ಕಾಂಗ್ರೆಸ್ ಬದುಕಿರುವವರೆಗೂ ದೇಶ ಉದ್ಧಾರವಾಗುವುದಿಲ್ಲ, ಕಾಂಗ್ರೆಸ್ ಮುಕ್ತ ಮಾಡಿದರೆ ಮಾತ್ರ ಪ್ರಧಾನಿ ನರೇಂದ್ರ ಮೋದಿ ಅವರ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಕನಸು ನನಸಾಗುತ್ತದೆ'' ಎಂದು ಹೇಳಿದರು.

ಪಕ್ಷದ ಶಿಸ್ತು ಮತ್ತು ಚೌಕಟ್ಟು ಮೀರಬಾರದು ಎಂದು ಕಾರ್ಯಕರ್ತರಿಗೆ ಸೂಚಿಸಿದ ಅವರು, 1981ರಿಂದಲೂ ಕಲ್ಯಾಣ ಕರ್ನಾಟಕಕ್ಕೆ ಬರುತ್ತಿರುವ ನಾನು ಇದುವರೆಗೆ ಈ ಭಾಗದ ಕಲ್ಯಾಣವೇ ಆಗಿಲ್ಲ ಎಂದು ಹೇಳಿದರು.

ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಮಾತನಾಡಿ, ಬಿಜೆಪಿ ಧ್ಯೆಯ ವಾಕ್ಯ ಮೊದಲು ದೇಶ ನಂತರ ಪಕ್ಷ ಎನ್ನುತ್ತದೆ. ಆದರೆ ಕಾಂಗ್ರೆಸ್ ಸ್ವಾತಂತ್ರ್ಯ ಕೊಡಿಸಿದ್ದೇವೆ ಎನ್ನುತ್ತಾರೆ. ಏನು ಸ್ವಾತಂತ್ರ್ಯ? ಎಷ್ಟು ದಿನ ಆಗಿದೆ? ಎಂತಹ ಸಾಧನೆ ಆಗಿದೆ? ಎಂದು ಕಾಂಗ್ರೆಸ್‌ನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಹಿರಿಯ ಮುಖಂಡ ಶರಣಪ್ಪ ತಳವಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹರ್ಷಾನಂದ್ ಗುತ್ತೇದಾರ್, ಪಕ್ಷದ ರಾಜ್ಯ ಮುಖಂಡ ಚನ್ನಮ್ಮ ಪಾಟೀಲ್, ಶಶಿಕಲಾ ಟೆಂಗಳಿ, ಜಿಪಂ ಮಾಜಿ ಸದಸ್ಯೆ ಶೋಭಾ ಬಾಣಿ, ರುದ್ರಯ್ಯಾ ಸ್ವಾಮಿ, ಬಸವರಾಜ ಬೆಣ್ಣೂರ, ಧರ್ಮಣ್ಣಾ ಇಟಗಾ, ಸಹನಾ ಪಾಟೀಲ್ ಸೇರಿ ಹಲವರು ಉಪಸ್ಥಿತರಿದ್ದರು.

ಕನ್ನಡ ನಾಡು ನುಡಿ ಹೋರಾಟಕ್ಕೆ ಜಯ ಕರ್ನಾಟಕ ಸಂಘಟನೆ ಸದಾ ಸಿದ್ದ : ಆಕಾಶ ನಂದಗಾಂವ



ಕಾಗವಾಡ,ಮಾ.30

ಕನ್ನಡ ನಾಡು ನುಡಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಹಾಗೂ ಅಡಚಣೆಗಳನ್ನು ನಿವಾರಿಸಲು ನಮ್ಮ ಸಂಘಟನೆ ಸದಾ ಸಿದ್ದವಾಗಿರುತ್ತೆ, ಆ ನಿಟ್ಟಿನಲ್ಲಿ ಕೆಲಸ ನಿರ್ವಹಿಸಲು ಇಂದು ಕೆಂಪವಾಡ ಗ್ರಾಮದಲ್ಲಿ 34 ನೇಯ ಗ್ರಾಮ ಘಟಕ ಉದ್ಘಾಟನೆ ಮಾಡಿದ್ದೇವೆ ಎಂದು ಜಯ ಕರ್ನಾಟಕ ಸಂಘಟನೆ ತಾಲೂಕಾಧ್ಯಕ್ಷ ಆಕಾಶ ನಂದಗಾಂವ ಅವರು ಹೇಳಿದರು.

ಅವರು ಕಾಗವಾಡ ತಾಲೂಕಿನ ಕೆಂಪವಾಡ ಗ್ರಾಮದಲ್ಲಿ 34 ನೇಯ ಗ್ರಾಮ ಘಟಕ ಶಾಖೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಗಡಿ ಭಾಗದಲ್ಲಿ ಕನ್ನಡಿಗರ ಸಮಸ್ಯೆ ಬಗೆಹರಿಸುವ ಉದ್ದೇಶದ ಜೊತೆಗೆ ಕನ್ನಡವನ್ನು ಸದೃಢವಾಗಿ ಪಸರಿಸುವ ಕಾಯಕವನ್ನು ನಮ್ಮ ಸಂಘಟನೆಯ ಪದಾಧಿಕಾರಿಗಳು ಮಾಡುತ್ತಿದ್ದಾರೆ ಎಂದರು.

ಅನಂತರ ಮುಖಂಡ ಸಂತೋಷ ಬಡಕಂಬಿ ಮಾತನಾಡಿ ಶೀಘ್ರವೇ ತಾಲೂಕಾ ಮಟ್ಟದಲ್ಲಿ ದೊಡ್ಡ ಉತ್ಸವ ಮಾಡಿ ಸಂಘಟನೆಯನ್ನು ಬಲಪಡಿಸೋಣ ಎಂದರು.

ಅನಂತರ ವಿನೋದ ಕಾಂಬಳೆ, ವಿಜಯ ಬೀಸೆ, ಪ್ರಶಾಂತ ಚೌಗಲಾ, ಸಂಜಯ ವಾಘಮೋಡೆ ಅವರು ಮಾತನಾಡಿದರು.

ಈ ವೇಳೆ ಕೆಂಪವಾಡ ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ಸಚಿನ ಹೆರವಾಡೆ, ಉಪಾಧ್ಯಕ್ಷರನ್ನಾಗಿ ಕರೆಪ್ಪ ಹಟ್ಟಿಮನಿ ಅವರನ್ನು ನೇಮಕ ಮಾಡಲಾಯಿತು.

ಈ ವೇಳೆ ವಿನಾಯಕ ಘಾಳಿ, ರಾಜು ಸೆಮಡೆ, ಬಾಳು ನಾಯಿಕ, ಅಮಸಿದ್ದ ತಪಲೆ, ಬಸಪ್ಪ ಹೇರವಾಡ, ವಿಕಾಸ ಮೋರೆ, ಸಾಗರ ಗಲಗಲಿ, ಅರುಣ ತಪಲೆ, ಪಿಂಟು ಘಾಳಿ, ರಮಜಾನ ಇನಾಮದಾರ, ಸುನೀಲ ಹೇರವಾಡೆ, ಉಮೇಶ ಕೋಳಿ ಸೇರಿದಂತೆ ಇತರರಿದ್ದರು.

ಕಲಹಳ್ಳಿ ಅರಣ್ಯದಲ್ಲಿ ವ್ಯಕ್ತಿಯ ಕೊಳೆತ ಶವ ಪತ್ತೆ ಕೊಲೆ -ಶಂಕೆ

ಜಮುಖಂಡಿ ಮಾ.29: ಜಮುಖಂಡಿ ತಾಲ್ಲೂಕಿನ ಕಲಹಳ್ಳಿ ಗ್ರಾಮದ ಸಿದ್ದಾಪುರ ರಸ್ತೆಯ ಅರಣ್ಯ ಪ್ರದೇಶದಲ್ಲಿ ವ್ಯಕ್ತಿಯೊಬ್ಬರ ಕೊಳೆತ ಸ್ಥಿತಿಯ ಶವ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾ ಗಿದೆ.

ವೃತ ವ್ಯಕ್ತಿ ಯನ್ನು ರಬಕವಿ-ಬನಹಟ್ಟಿ ತಾಲೂಕಿನ ನಾವಲಗಿ ಗ್ರಾಮದ ಈರಪ್ಪಾ ಅಲ್ಲಪ್ಪಾ ಇಕ್ಕಡಿ (ವಯಸ್ಸು 40) ಎಂದು ಗುರುತಿ ಸಲಾಗಿದೆ.

ಸ್ಥಳೀಯರು ಗಮನಿಸಿ ಪೆಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ತಕ್ಷಣವೇ ಪೆಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಘಟನಾ ಸ್ಥಳಕ್ಕೆ ಸಿಪಿಐ ಮಲ್ಲಪ್ಪ ಮಡ್ಡಿ ಹಾಗೂ ಪಿಎಸ್‌ಐ ಗಂಗಾಧರ ಪೂಜೇರಿ ಅವರ ನೇತೃತ್ವದ ಪೆಲೀಸ್ ತಂಡ ಭೇಟಿ ನೀಡಿ ಶವ ವನ್ನು ಪರಿಶೀ ಲಿಸಿ, ಮರ ಣೋತ್ತರ ಪರೀಕ್ಷೆಗಾಗಿ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಈ ಸಂಬಂಧ ಜಮುಖಂಡಿ ಗ್ರಾಮೀಣ ಪೆಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಈ ವೇಳೆ ಅರಣ್ಯ ಗಸ್ತು ಪಾಲಕ ಈರಣ್ಣ ಪೆದ್ದಾರ ಹಾಗೂ ಪೆಲೀಸ್ ಸಿಬ್ಬಂದಿಗಳಾದ ಆದಿನಾಥ ಸದಲಗಿ, ಸಿದ್ದು ಸನಗೌಡರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾಲ ಮಾಡಿಯಾದರೂ ಯುಕೆಪಿಗೆ ಅನುದಾನ: ಪಾಟೀಲ



ಬಾಗಲಕೋಟೆ, ಮಾ.30-

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ. ಪೂರಕ ಬಜೆಟ್‌ನಲ್ಲಿಯೂ ನೀಡಲಾಗುವುದು. ಯೋಜನೆ ಪೂರ್ಣಗೊಳಿಸಲಾಗುವುದು. ಯುಕೆಪಿಗೆ ಹಿಂದಿನ ಅವಧಿಯಲ್ಲಿ ₹57 ಸಾವಿರ ಕೋಟಿ ಖರ್ಚು ಮಾಡಲಾಗಿದೆ ಎಂದರು.

ನೀರಾವರಿ ಸಚಿವರಾಗಿದ್ದಾಗ ಬಾಗಲಕೋಟೆಗೆ ನೀಡಿದ ಅನುದಾನ ಕೊಟ್ಟಿರುವ ಹಾಗೂ ನೀರು ಹಂಚಿಕೆಯಲ್ಲಿ ಬಾಗಲಕೋಟೆಗೆ ಆಗಿರುವ ಅನ್ಯಾಯ ಕುರಿತ ಪ್ರಶ್ನೆಗಳಿಗೆ, ಸಾಕಷ್ಟು ಅನುದಾನ ಕೊಟ್ಟಿದ್ದೇನೆ. ಸದ್ಯಕ್ಕೆ ಮಾಹಿತಿ ಇಲ್ಲ ಎಂದರು. ಯುಕೆಪಿ ಕುರಿತ ಬಿಜೆಪಿ ನಾಯಕರ ಆರೋಪದ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ದನಿದ್ದೇನೆ ಎಂದು ಸವಾಲು ಹಾಕಿದರು.

ಉತ್ತರ ಕರ್ನಾಟಕದ ಕಡೆಗೆ ಕೈಗಾರಿಕೆಗಳನ್ನು ತರುವ ಕೆಲಸ ಆಗುತ್ತಿದೆ. ಬಾಗಲಕೋಟೆ, ವಿಜಯಪುರಕ್ಕೂ ಕೈಗಾರಿಕೆಗಳು ಬರಲಿವೆ. ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ತೆಗೆದುಕೊಂಡು ಕಾರ್ಖಾನೆ ಆರಂಭಿಸದವರಿಗೆ ನೋಟಿಸ್ ನೀಡಲಾಗುತ್ತಿದೆ. ಬಾಗಲಕೋಟೆಯಲ್ಲಿಯೂ ನೀಡಲಾಗಿದೆ ಎಂದು ಹೇಳಿದರು.

ಬಿಜೆಪಿಗೆ ನಾಯಕತ್ವ ಇಲ್ಲ. ಅಲ್ಲಿ ಹಲವು ಗುಂಪುಗಳಾಗಿವೆ. ಉಪಚುನಾವಣೆಗಳಲ್ಲಿ ಮಾತ್ರವಲ್ಲ, 2028ರ ವಿಧಾನಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಾಲ್ಕು ವರ್ಷಗಳಲ್ಲಿ ಬಿಜೆಪಿ ಮೂವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ಹಣ ತೆಗೆದಿರಿಸದೇ ಲಕ್ಷಾಂತರ ಕೋಟಿ ರೂಪಾಯಿ ಮೊತ್ತದ ಟೆಂಡರ್ ಕರೆಯುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿತ್ತು. ಆ ಬಾಕಿ ತೀರಿಸುವುದರ ಜೊತೆಗೆ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದೇವೆ. ಅಭಿವೃದ್ಧಿ ಕಾರ್ಯಗಳನ್ನೂ ಮಾಡುತ್ತಿದ್ದೇವೆ ಎಂದರು.

ಕಾಂಗ್ರೆಸ್ ಏನು ಮಾಡಿದೆ ಎಂದು ಪ್ರಶ್ನಿಸುವರು, ಆಧಾರ್ ಪ್ರಶ್ನಿಸಿದವರು, ಆಧಾರ್ ಅನ್ನೇ ಎಲ್ಲದಕ್ಕೂ ದಾಖಲೆ ಮಾಡಿಕೊಂಡಿದ್ದಾರೆ. ಅದೇ ನರೇಗಾ ಯೋಜನೆಯನ್ನು ಮುಂದುವರೆಸಿದ್ದಾರೆ. ಹಸಿರು ಕ್ರಾಂತಿ, ಬ್ಯಾಂಕ್ ರಾಷ್ಟ್ರೀಕರಣ, ಎಚ್‌ಎಎಲ್, ಬಿಎಚ್‌ಎಲ್, ಇಸ್ರೊ ಸೇರಿದಂತೆ ಹಲವು ಕಾರ್ಯಗಳನ್ನು ಕಾಂಗ್ರೆಸ್ ಮಾಡಿದೆ ಎಂದು ಹೇಳಿದರು. ಡಾಲರ್ ಬೆಲೆ ಹೆಚ್ಚಾದಾಗ, ಬೆಲೆ ಏರಿಕೆಯಾದಾಗ ಪ್ರಧಾನಿ ನರೇಂದ್ರ ಮೋದಿ ಟೀಕೆ ಮಾಡುತ್ತಿದ್ದರು. ಅಚ್ಚೆ ದಿನ್ ಆಯಂಗೆ ಎನ್ನುತ್ತಿದ್ದರು. ಸಿಲಿಂಡರ್ ಬೆಲೆ ಹೆಚ್ಚಳ, ಪೆಟ್ರೋಲ್ ಬೆಲೆ ನೂರರ ಗಡಿ ದಾಟಿಸಿರುವುದು ಒಳ್ಳೆಯ ದಿನಗಳೇ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಆಡಳಿತವಿದ್ದಾಗ ರೈತರ ₹70 ಸಾವಿರ ಕೋಟಿ ಸಾಲ ಮನ್ನಾ ಮಾಡಲಾಗಿತ್ತು. ಮೋದಿ ಅವರು ಲಕ್ಷಾಂತರ ಕೋಟಿ ಉದ್ಯಮಿಗಳ ಸಾಲ ಮನ್ನಾ ಮಾಡಿದ್ದಾರೆ. ಇದು ಅವರ ಆಡಳಿತ ಎಂದು ಟೀಕಿಸಿದರು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಜಿಲ್ಲಾ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಅಜಯಕುಮಾರ ಸರನಾಯಕ, ಆನಂದ ನ್ಯಾಮಗೌಡ, ನಾಗರಾಜ ಹದ್ಲಿ ಇದ್ದರು.



ಬಳ್ಳಾರಿ ಪಡಿತರ ಅಕ್ಕಿ ಅಕ್ರಮ ದಾಸ್ತಾನು: 1.84 ಲಕ್ಷ ರೂ. ಮೌಲ್ಯದ ಅಕ್ಕಿ ಜಪ್ತಿ ಮಾಡಿದ ಪೊಲೀಸರು

ಬಳ್ಳಾರಿ,ಮಾ.30-

ಬಳ್ಳಾರಿ ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸುತ್ತಿದ್ದವರ ವಿರುದ್ಧ ಪೊಲೀಸರು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಭಾರೀ ಪ್ರಮಾಣದ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಎನ್.ಪಿ.ಆರ್. ಲೇಔಟ್ ಸಮೀಪದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ದಾಸ್ತಾನು ಮಾಡಿರುವ ಕುರಿತು ದೊರೆತ ಮಾಹಿತಿ ಮೇರೆಗೆ ದಾಳಿ ನಡೆಸಲಾಗಿತ್ತು. ಈ ವೇಳೆ ಒಟ್ಟು 40.80 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಗುಗ್ಗರಹಟ್ಟಿ ನಿವಾಸಿ ಶರಭಯ್ಯ (50) ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಮಾ.28ರಂದು ಕೊಳಗಲ್ಲು-ಸಿರುಗುಪ್ಪ ರಸ್ತೆಯಲ್ಲಿರುವ ಲೇಔಟ್ ಪ್ರದೇಶದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 82.80 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ.

ಖರ್ಜೂರ ಭಾನುವಾರ: ಮೆರವಣಿಗೆ



ನಾವದಗೇರಿ (ಜನವಾಡ): ಬೀದರ್ ತಾಲ್ಲೂಕಿನ ನಾವದಗೇರಿಯ ಇಮ್ಯಾನುಯೇಲ್ ಮೆಥೊಡಿಸ್ಟ್ ಚರ್ಚ್‌ನಲ್ಲಿ -ಖರ್ಜೂರ ಭಾನುವಾರ (ಪಾಮ್ ಸಂಡೇ) ಶ್ರದ್ದೆ, ಭಕ್ತಿಯಿಂದ ಆಚರಿಸಲಾಯಿತು. ಯೇಸು ಕ್ರಿಸ್ತರ ಜೇರುಸಲೇಂ ಪ್ರವೇಶದ ಸ್ಮರಣಾರ್ಥವಾಗಿ ಸಭಾಪಾಲಕ ಫ್ರಾನ್ಸಿಸ್ ಜಯವಂತ ಅವರ ನೇತೃತ್ವದಲ್ಲಿ ಚರ್ಚ್ ವ್ಯಾಪ್ತಿಯ ಪ್ರದೇಶದಲ್ಲಿ ಮೆರವಣಿಗೆ ನಡೆಯಿತು. ಕ್ರೈಸ್ತ ಧರ್ಮೀಯರು ಕೈಯಲ್ಲಿ ಖರ್ಜೂರದ ಗರಿಗಳನ್ನು ಹಿಡಿದು, ಹೊಸನ್ನಾ ಯೇಸನ್ನಾ ಎಂಬ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಪಾಲ್ಗೊಂಡರು. ಬಳಿಕ ಚರ್ಚ್‌ನಲ್ಲಿ ಆರಾಧನಾ ಕೂಟ ಸಹ ಜರುಗಿತು.

ಸಂಜಯ್ ರಾಜ್, ನಜ್ರೆನ್ ಬುಡೇರಿ, ಸುನಿಲ್ ಬಚ್ಚನ್, ಮೊಸೆಸ್ ಜಿ. ಫಿಲಿಪ್, ಆ್ಯಡಮ್ ಅಕ್ಷಯ್, ಪ್ರಶಾಂತ ನರಸಣ್ಣ, ಸ್ವಾಮಿದಾಸ್, ಲಖನ್, ಅರವಿಂದ, ಆನಂದ ಭಾಗವಹಿಸಿದ್ದರು.



ಸಿರುಗುಪ್ಪ: ಕನ್ನಡ ಚಲನಚಿತ್ರ ಉಳಿವಿಗೆ ಪ್ರೇಕ್ಷಕರ ಕೊಡುಗೆ ಅಪಾರ - ರಾಜೇಂದ್ರ ಸಿಂಗ್ ಬಾಬು

ಸಿರುಗುಪ್ಪ,ಮಾ.30-

ಕನ್ನಡ ಚಲನಚಿತ್ರ ಉಳಿವಿಗೆ ಗ್ರಾಮೀಣ ಭಾಗದ ಪ್ರೇಕ್ಷಕರ ಕೊಡುಗೆ ಅಪಾರ ಎಂದು ಚಿತ್ರರಂಗದ ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು ಅವರು ಹೇಳಿದರು

ಸಿರುಗುಪ್ಪ ತಾಲೂಕು ಸಿರಿಗೇರಿ ಗ್ರಾಮದ ನಾಗನಾಥೇಶ್ವರ ದೇವಾಲಯ ಮುಂಭಾಗದಲ್ಲಿ ಅನ್ನಪೂರ್ಣ ಪ್ರಕಾಶನ ದಿಂದ ಹಮ್ಮಿಕೊಂಡ ಶಂಕರ್ ಸಿಂಗ್ ಹಾಗೂ ಸುಭದ್ರಮ್ಮ ಮನ್ಸೂರು ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಾ ಗ್ರಾಮೀಣ ಭಾಗದಲ್ಲಿ ಮಹಾತ್ಮ ಟೂರಿಂಗ್ ಟಾಕೀಸ್ ಹಾಗೂ ನೆಹರು ಟೂರಿಂಗ್ ಟಾಕೀಸ್ ಆರಂಭಿಸಿದರು ರಾಜ್ಯ ಸರ್ಕಾರ ಚಿತ್ರ ನಗರಿ ಸ್ಥಾಪಿಸಲು ಮುಂದಾಗಿದೆ ಸಂತಸದ ವಿಷಯ ಎಂದರು ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮಾತನಾಡಿ ಚಿತ್ರೋದ್ಯಮದಲ್ಲಿ ಖ್ಯಾತ ನಾಮರಾದ ಶಂಕರ್ ಸಿಂಗ್ ಅವರ ಹೆಸರಿನ ಪ್ರಶಸ್ತಿ ಸ್ವೀಕರಿ ಸಿದ್ದು ನನ್ನ ಹೆಮ್ಮೆ ಕಥೆ ಕಾದಂಬರಿ ಆಧಾರಿತ ಅವರ ಚಲನಚಿತ್ರಗಳು ಪ್ರೇಕ್ಷಕರನ್ನು ಸೆಳೆಯುತ್ತಿದ್ದವು ಈಗಿನ ಚಿತ್ರಗಳಲ್ಲಿ ಹಿಂಸೆ ಕ್ರೌರ್ಯ ವಿಜೃಂಭಿಸುತ್ತಿದೆ ಎಂದು ವಿಷಾಧಿಸಿದರು ಕರ್ನಾಟಕ ರಾಜ್ಯ ಸರ್ಕಾರದ ಮಾಜಿ ಸಚಿವೆ ವಿಧಾನ ಪರಿಷತ್ ಶಾಸಕಿ ಉಮಾಶ್ರೀ ಅವರು ಮಾತನಾಡಿ ರಂಗಭೂಮಿಗೆ ಬಳ್ಳಾರಿಯ ರಾಘವಾಚಾರಿ ಮತ್ತು ಲಲಿತಮ್ಮ ಅವರ ಕೊಡುಗೆ ಅಪಾರ ಸುಭದ್ರಮ್ಮ ಮನ್ಸೂರ್ ಅವರ ಗರಡಿಯಲ್ಲಿ ಬೆಳೆದು ಅವರೊಟ್ಟಿಗೆ ಪಾತ್ರ ಮಾಡಿದ್ದು ನನ್ನ ಜೀವನದ ಹೆಗ್ಗಳಿಕೆ ಎಂದರು ಪಿ ಎಚ್ ವಿಶ್ವನಾಥ್ ಗ್ರಾಮ ಪಂಚಾಯತ್ ಅಧ್ಯಕ್ಷರು ಹೊಳಗುಂದಿ ಲಕ್ಷ್ಮಿ ಕೆ.ದೇವಣ್ಣ ಸಿರಿಗೇರಿ ಎರ್ರಿಸ್ವಾಮಿ ಮಂಜುನಾಥ್ ಗೋವಿಂದವಾಡ ಸಿ ಎಂ ಚನ್ನಬಸಯ್ಯಸ್ವಾಮಿ ಕೆ ಎಂ ದೇವರಾಜಯ್ಯ ರಾಚೋಟಯ್ಯ ಸ್ವಾಮಿ ಅಬ್ದುಲ್ ನಬಿ ಶಶಿಧರ್ ಮತ್ತಿತರರು ಇದ್ದರು

ಆಡಳಿತ, ಸಂಘಟನೆಯಲ್ಲಿ ಮಹಿಳೆಯರು ಮುಂದು



ಕಲಬುರಗಿ, ಮಾ.30-

ನಗರದ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಭಾನುವಾರ ನಡೆದ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಜಿಲ್ಲಾ ಘಟಕ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ, ಸಾರ್ಥಕ ಸೇವಾ ಶಿರೋಮಣಿ ಪ್ರಶಸ್ತಿ ಪ್ರದಾನ ಹಾಗೂ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಣ್ಣುಮಕ್ಕಳು ಯಾವುದರಲ್ಲೂ ಕಡಿಮೆ ಇಲ್ಲ. ಆದರೆ ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ನಾವು ಇದನ್ನು ಬಿಚ್ಚು ಮನಸ್ಸಿನಿಂದ ಹೇಳುವುದಿಲ್ಲ. ಎಲ್ಲ ಕ್ಷೇತ್ರದಲ್ಲೂ ಸ್ತ್ರೀಯರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಂದಿರಾಗಾಂಧಿ, ಪ್ರತಿಭಾ ಪಾಟೀಲ ಕ್ರಮವಾಗಿ ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿಯಾಗಿ ದೇಶ ಆಳಿದರು ಎಂದರು.

ಮಹಿಳೆಯರು ಪ್ರಾಮಾಣಿಕತೆಯಲ್ಲಿ ಶ್ರೇಷ್ಠರು. ಅವರಿಗೆ ಕೆಟ್ಟ ಹವ್ಯಾಸಗಳು ಇರುವುದಿಲ್ಲ. ಮಕ್ಕಳ ಪಾಲನೆ, ಪೋಷಣೆಯ ಜೊತೆಗೆ ಮನೆ ಕೆಲಸ ಸೇರಿದಂತೆ ಕಚೇರಿ ಕೆಲಸಗಳನ್ನು ನಿರ್ವಹಿಸುತ್ತಾರೆ. ಪುರುಷರ ಬೆಳವಣಿಗೆಗೂ ಮಹಿಳೆಯರು ಕಾರಣರಾಗುತ್ತಾರೆ ಎಂದು ಶ್ಲಾಘಿಸಿದರು.

ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಮಾತನಾಡಿ, ಮಹಿಳೆಯರ ಸಂಘಕ್ಕೆ ಎಲ್ಲ ರೀತಿಯ ಸಹಕಾರ ಕೊಡುತ್ತೇವೆ. ಅವರು ಒಗ್ಗಟ್ಟಾಗಬೇಕು. ಮಕ್ಕಳನ್ನು ಬೆಳೆಸಿ ದೇಶದ ಶಕ್ತಿಯಾಗಿಸುವ ಸಾಮರ್ಥ್ಯ ಮಹಿಳೆಯರಿಗಿದೆ. ಒಪಿಎಸ್ ಜಾರಿ ಸೇರಿದಂತೆ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲಾಗುವುದು ಎಂದರು.

ಸಂಘದ ರಾಜ್ಯಾಧ್ಯಕ್ಷೆ ರೋಷನಿಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದಲ್ಲಿ ಶೇ 52ರಷ್ಟು ಮಹಿಳಾ ನೌಕರರು ಸರ್ಕಾರಿ ಸೇವೆಯಲ್ಲಿದ್ದಾರೆ. ಎಲ್ಲರಿಗೂ ಅನುಕೂಲ ಸಿಗಲಿ ಎಂಬ ಉದ್ದೇಶದಿಂದ ಸಂಘ ಕಟ್ಟಿದ್ದು, 20 ಜಿಲ್ಲೆಗಳಲ್ಲಿ ಇದು ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ಮನವಿಗೆ ಓಗೊಟ್ಟು ಋತುಚಕ್ರ ರಜೆ ಮಂಜೂರಾಗಿದೆ. ಸೆ. 13ಅನ್ನು ಮಹಿಳಾ ನೌಕರರ ದಿನವನ್ನಾಗಿ ಆಚರಿಸುವಂತೆ ಅನುಮತಿ ಪಡೆದಿದ್ದೇವೆ ಎಂದರು

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಆನ್‌ಲೈನ್ ಮೂಲಕ ಸಂಘಕ್ಕೆ ಶುಭ ಕೋರಿದರು.

ಜಿಲ್ಲಾಧ್ಯಕ್ಷೆ ರೇಣುಕಾ ಡಾಂಗೆ ಸಂಪಾದಿಸಿದ ಮಮತೆಯ ಮಡಿಲು ಕವನ ಸಂಕಲನ ಬಿಡುಗಡೆ ಮಾಡಲಾಯಿತು. ವಿವಿಧ ಇಲಾಖೆಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಮಹಿಳಾ ನೌಕರರಿಗೆ ಸಾರ್ಥಕ ಸೇವಾ ಶಿರೋಮಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಫಜಲಪುರದ ಮಳೇಂದ್ರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶಶಿಕಲಾ ಕೆ., ಕೋಶಾಧ್ಯಕ್ಷೆ ವೀಣಾ ಕೃಷ್ಣಮೂರ್ತಿ, ಪಾಲಿಕೆ ಉಪಮೇಯರ್ ತೃಪ್ತಿ ಲಾಖೆ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಲ್ಲಯ್ಯ ಗುತ್ತೇದಾರ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಮಹೇಶ ಹುಬ್ಬಳ್ಳಿ, ಆಶಾರಾಣಿ, ಸೇವಂತಾ ಚವ್ಹಾಣ್, ಪಾರ್ವತಿ ಸೋನಾರೆ, ದೇವಿಕಾ ಶರಣು ಶೆಟ್ಟಿ, ಲಕ್ಷ್ಮಿ ಬಿರಾದಾರ, ಕೆ.ಬಿ.ಬಬಲಾದಿ, ರಾಘವೇಂದ್ರ ಠಾಣೆಯ ಪಿಎಸ್‌ಐ ಯಶೋದಾ ಕಟಕೆ, ನವಲಿಂಗ ಪಾಟೀಲ, ಸಂಘದ ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಪದಾಧಿಕಾರಿಗಳು ಹಾಜರಿದ್ದರು. ರಜನಿ ಪಾಟೀಲ ಸ್ವಾಗತಿಸಿದರು. ಭುವನೇಶ್ವರಿ ನಿರೂಪಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಅಸ್ಪೃಶ್ಯತೆ ಅಳಿಸಿರಿ; ಇಲ್ಲವೇ ಇಸ್ಲಾಮ್-ಕ್ರೈಸ್ತ ಅಸ್ಪೃಶ್ಯರಿಗೂ ಸೌಲಭ್ಯ ನೀಡಿರಿ



ಪರಿಶಿಷ್ಟ ಜಾತಿಗೆ ಸೇರಿದವರು ಹಿಂದೂಧರ್ಮ, ಬೌದ್ಧ ಧರ್ಮ ಹಾಗೂ ಸಿಖ್ ಧರ್ಮದ ವಿನಾ ಬೇರೆ ಯಾವ ಧರ್ಮಕ್ಕೆ ಮತಾಂತರಗೊಂಡರೆ ತಕ್ಷಣದಿಂದಲೇ ಅವರು, ಪರಿಶಿಷ್ಟ ಜಾತಿಗೆ ಸಂಬಂಧಿಸಿದ ಶಾಸನಾತ್ಮಕ ಸೌಲಭ್ಯಗಳು ಮತ್ತು ರಕ್ಷಣೆಗಳನ್ನು ಕಳೆದುಕೊಳ್ಳುವರು ಎಂಬುದಾಗಿ ಸುಪ್ರೀಮ್ ಕೋರ್ಟ್ ತೀರ್ಪು ನೀಡಿದೆ. ಭಾರತೀಯ ಸಮಾಜದ ಮೇಲೆ ಜಾತಿಭೇದದ ಉಕ್ಕಿನ ಹಿಡಿತದ ಕಠೋರ ವಾಸ್ತವವನ್ನು ಈ ತೀರ್ಪು ಅವಗಣಿಸಿದೆ. ಬಿಜೆಪಿ ಮತ್ತು ಆರೆಸ್ಸೆಸ್ ಅನುಗಾಲದಿಂದ ತಳೆದಿರುವ ನಿಲುವಿಗೆ ಈ ತೀರ್ಪು ಪುಷ್ಟಿ ನೀಡಿರುವುದು ನಿಚ್ಚಳ.

ಕ್ರೈಸ್ತ ಮತವನ್ನು ಸ್ವೀಕರಿಸಿದ್ದ ಪರಿಶಿಷ್ಟ ಜಾತಿಯ ವ್ಯಕ್ತಿಯೊಬ್ಬ ತನ್ನ ಮೇಲೆ ನಡೆದ ಜಾತಿವಾದಿ ದಾಳಿಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆಯ ಅಡಿಯಲ್ಲಿ ರಕ್ಷಣೆ ಬಯಸಿದ್ದ ಅರ್ಜಿಯನ್ನು ಆಂಧ್ರಪ್ರದೇಶದ ಹೈಕೋರ್ಟು ಇತ್ತೀಚೆಗೆ ವಜಾ ಮಾಡಿತ್ತು. ಇದೀಗ ಸುಪ್ರೀಮ್ ಕೋರ್ಟು ಕೂಡ ಹೈಕೋರ್ಟಿನ ತೀರ್ಪನ್ನು ಎತ್ತಿ ಹಿಡಿದಿದೆ. ತಾನು ಮಾದಿಗ ಜಾತಿಗೆ ಸೇರಿದವನೆಂದು ಸರ್ಕಾರವೇ ನೀಡಿರುವ ಪ್ರಮಾಣ ಪತ್ರ ತನ್ನ ಬಳಿ ಇರುವುದಾಗಿ ಮೇಲ್ಮನವಿದಾರನ ನಿವೇದನೆಯನ್ನು ನ್ಯಾಯಾಲಯ ಲಕ್ಷಿಸಿಲ್ಲ. ಮೇಲ್ಮನವಿದಾರನು ಕ್ರೈಸ್ತ ಧರ್ಮವನ್ನು ಆಚರಿಸುತ್ತಿರುವ ವ್ಯಕ್ತಿ. ಹೀಗಿರುವಾಗ ಪ್ರಮಾಣಪತ್ರ ಲೆಕ್ಕಕ್ಕೆ ಬರುವುದಿಲ್ಲ. ಮೇಲ್ಮನವಿದಾರ ಹಿಂದೂ ಧರ್ಮಕ್ಕೆ ಮರಳಿದ್ದಾರೆನ್ನಲು ಯಾವ ಸಾಕ್ಷ್ಯವೂ ಇಲ್ಲ ಎಂದಿದೆ.

ಈ ತೀರ್ಪು 1950ರ ಸಂವಿಧಾನ (ಪರಿಶಿಷ್ಟ ಜಾತಿ) ಆದೇಶ ಆಧರಿಸಿದೆ. ಹಿಂದೂ ಧರ್ಮವನ್ನು ಬಿಟ್ಟು ಇತರೆ ಯಾವುದೇ ಧರ್ಮವನ್ನು ಅನುಸರಿಸುವವರನ್ನು ಪರಿಶಿಷ್ಟ ಜಾತಿಯ ಸದಸ್ಯರೆಂದು ಕರೆಯಲು ಬರುವುದಿಲ್ಲ ಎಂದು ಈ ಆದೇಶ ಹೇಳಿತ್ತು. ತರುವಾಯ 1956ರಲ್ಲಿ ಹಿಂದೂಧರ್ಮದ ಜೊತೆಗೆ ಸಿಖ್ ಧರ್ಮವನ್ನು ಸೇರಿಸಲಾಯಿತು. 1990ರಲ್ಲಿ ಬೌದ್ಧ ಧರ್ಮ ಕೂಡ ಈ ಆದೇಶದ ವ್ಯಾಪ್ತಿಗೆ ಸೇರಿತು. ಖುದ್ದು ಬಿ.ಆರ್.ಅಂಬೇಡ್ಕರ್ ಅವರೇ 1956ರಲ್ಲಿ ಬುದ್ಧಧರ್ಮಕ್ಕೆ ಲಕ್ಷಾಂತರ ಅಸ್ಪೃಶ್ಯರ ಸಾಮೂಹಿಕ ಮತಾಂತರದ ನೇತೃತ್ವ ವಹಿಸಿದ್ದರು. ಆದರೆ 1956ರಲ್ಲಿ ಸಿಖ್ ಧರ್ಮಕ್ಕೆ ಮತಾಂತರ ಹೊಂದಿದ ಅಸ್ಪೃಶ್ಯರಿಗೆ ಮಾತ್ರವೇ ಮೀಸಲಾತಿ ಮತ್ತು ಸಂರಕ್ಷಣೆಯ ಸೌಲಭ್ಯಗಳನ್ನು ವಿಸ್ತರಿಸಲಾಯಿತು. ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ ಅಸ್ಪೃಶ್ಯರು 1990ರ ತನಕ ಕಾಯಬೇಕಾಯಿತು. ಈ ವಿಪರೀತ ವಿಳಂಬ ಅಸ್ಪೃಶ್ಯರು ಹಿಂದೂ ಧರ್ಮದ ಅಮಾನುಷ ಹಿಡಿತದಿಂದ ಬಿಡಿಸಿಕೊಂಡು ಬೌದ್ಧ ಧರ್ಮ ಸ್ವೀಕರಿಸುವ ವೇಗವನ್ನು ಕತ್ತರಿಸಿ ಹಾಕಿತೆಂಬುದು ಬೇರೆಯದೇ ಚರ್ಚೆಯ ವಸ್ತು. ಆದರೆ 1950ರ ಆದೇಶಕ್ಕೆ ಆರೇ ವರ್ಷಗಳ ನಂತರ ಸಿಖ್ ಧರ್ಮ ಸೇರಿತು ಮತ್ತು 40 ವರ್ಷಗಳ ತರುವಾಯ ಬೌದ್ಧದ ಸೇರ್ಪಡೆಯಾಯಿತು. ಅರ್ಥಾತ್ ಈ ಆದೇಶಕ್ಕೆ ತಿದ್ದುಪಡಿಗಳಾಗುತ್ತ ಬಂದಿವೆ ಎಂಬುದು ಗಮನಾರ್ಹ ಸಂಗತಿ.

ಜಾತಿಗ್ರಸ್ತ ವ್ಯಾಧಿ ಆಳಕ್ಕೆ ಬೇರಿಳಿಸಿರುವ ಭಾರತದಲ್ಲಿ ಮೇಲು ಕೀಳಿನ ಜಾತಿ ಭೇದದ ವಾಸ್ತವ ಮತಾಂತರ ಹೊಂದಿದಾಕ್ಷಣ ಮಾಯವಾಗಿಬಿಡುವುದಿಲ್ಲ. ಈ ಮಾತಿಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಕೊಲೆ, ಅತ್ಯಾಚಾರ, ದೌರ್ಜನ್ಯ, ಬಹಿಷ್ಕಾರ ಮುಂತಾದ ಲಕ್ಷಾಂತರ ಉದಾಹರಣೆಗಳು ದೊರೆಯುತ್ತವೆ. ಮತಾಂತರ ಹೊಂದಿದ ಪರಿಶಿಷ್ಟರನ್ನು ಹೊಸ ಧರ್ಮ ಅಥವಾ ಅವರ ಹಳೆಯ ಧರ್ಮಗಳು ಸಮಾನರೆಂದು ಆಲಿಂಗಿಸಿ ತಬ್ಬಿ ಹಿಡಿದು ಹತ್ತಿರ ಕರೆದುಕೊಳ್ಳುವುದಿಲ್ಲ. ಅವರೊಂದಿಗೆ ವಿವಾಹ ಸಂಬಂಧಗಳನ್ನು ಬೆಳೆಸುವುದಿಲ್ಲ, ಇಲ್ಲವೇ ಅವರನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಒಟ್ಟಿಗೆ ಊಟ ಮಾಡುವುದಿಲ್ಲ. ಕ್ರೈಸ್ತ ಅಥವಾ ಮುಸ್ಲಿಮ್ ಧರ್ಮಕ್ಕೆ ಮತಾಂತರ ಹೊಂದಿದವರೂ ತಾರತಮ್ಯದಿಂದ ಮುಕ್ತರಾಗಿಲ್ಲ. ಸಿಖ್-ಬೌದ್ಧವೂ ಸೇರಿದಂತೆ ಕ್ರೈಸ್ತ-ಮುಸ್ಲಿಮ್ ಧರ್ಮಗಳಿಗೆ ಮತಾಂತರ ಹೊಂದಿದವರು ಅಸ್ಪೃಶ್ಯತೆಯ ಭೇದಭಾವವನ್ನು ಎದುರಿಸಿಲ್ಲ ಎಂಬ ನಿರ್ಣಾಯಕ ಉದಾಹರಣೆಗಳನ್ನು, ಮತಾಂತರಿಗಳಿಗೆ ಮೀಸಲಾತಿ-ಸಂರಕ್ಷಣೆ ಸೌಲಭ್ಯ ಕೂಡದು ಎಂದು ವಾದಿಸುವವರು ನೀಡಲು ಸಿದ್ಧರಿದ್ದಾರೆಯೇ? ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಗಳು ಸೈದ್ಧಾಂತಿಕವಾಗಿ ಜಾತಿ ಪದ್ಧತಿಯನ್ನು ಒಪ್ಪಿಲ್ಲ ಎಂಬ ಕಾರಣವನ್ನೇ ನೀಡುವುದಾದರೆ, ಸಿಖ್ ಧರ್ಮ ಮತ್ತು ಬೌದ್ಧ ಕೂಡ ಸೈದ್ಧಾಂತಿಕವಾಗಿ ಜಾತಿ ಪದ್ಧತಿಯನ್ನು ಒಪ್ಪಿಲ್ಲ.

ಅಸಮಾನ ಸಮಾಜದಲ್ಲಿ ಮತಾಂತರವು ಸಮಾನತೆಯನ್ನು ಗಳಿಸಿಕೊಡುವುದಿಲ್ಲ. ಕಾಕಾ ಕಾಲೇಲ್ಕರ್ ಅಧ್ಯಕ್ಷತೆಯ ಮೊದಲ ಹಿಂದುಳಿದ ವರ್ಗಗಳ ಆಯೋಗವು ಕ್ರೈಸ್ತ ಮತ್ತು ಮುಸ್ಲಿಮರಲ್ಲಿಯೂ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ನೆಲೆಸಿರುವುದನ್ನು ಎಂದು ಹೇಳಿದೆ. ಮಂಡಲ್ ಆಯೋಗವೂ ಈ ಮಾತನ್ನು ಪುನರುಚ್ಚರಿಸಿದೆ.

ನ್ಯಾಯಾಲಯದ ತೀರ್ಪು 1950ರ ಆದೇಶದಲ್ಲಿನ ನಿರ್ಬಂಧಗಳನ್ನು ಆಧರಿಸಿದೆ. ಹಿಂದೂ, ಬೌದ್ಧ, ಸಿಖ್ ಧರ್ಮದ ವಿನಾ ಬೇರೆ ಯಾವುದೇ ಧರ್ಮಕ್ಕೆ ಮತಾಂತರ ಹೊಂದಿದವರಿಗೆ ಪರಿಶಿಷ್ಟ ಜಾತಿಯ ಶಾಸನಾತ್ಮಕ ಸೌಲಭ್ಯಗಳು ಮತ್ತು ಸಂರಕ್ಷಣೆಗಳು ದೊರೆಯುವುದಿಲ್ಲ ಎಂಬ ನಿರ್ಬಂಧಗಳಿವು. ಆದರೆ 1950ರ ಈ ಆದೇಶವನ್ನು ಪ್ರಶ್ನಿಸಿದ್ದು, ಕ್ರೈಸ್ತ ಮತ್ತು ಮುಸ್ಲಿಮ್ ಧರ್ಮಕ್ಕೆ ಮತಾಂತರಗೊಂಡ ಅಸ್ಪೃಶ್ಯರಿಗೂ ಈ ಸೌಲತ್ತು ವಿಸ್ತರಿಸಬೇಕೆಂದು 2004ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ಇನ್ನೂ ಸುಪ್ರೀಮ್ ಕೋರ್ಟಿನಲ್ಲಿ ಮುಂದುವರೆದಿದೆ.

ಹಾಲಿ ತೀರ್ಪಿನಲ್ಲಿ ಹಿಂದೂ ಧರ್ಮಕ್ಕೆ ಮರು ಮತಾಂತರ ಹೊಂದುವ ಕುರಿತ ಪ್ರಸ್ತಾಪವಿದೆ. ಕ್ರೈಸ್ತ-ಇಸ್ಲಾಮ್‌ಗೆ ಮತಾಂತರ ಹೊಂದಿದವರು ಒಂದು ವೇಳೆ ಹಿಂದೂ-ಸಿಖ್-ಬೌದ್ಧಕ್ಕೆ ಮರುಮತಾಂತರ ಹೊಂದುವುದೇ ಆದಲ್ಲಿ ಅದಕ್ಕೆ ಮೂರು ಷರತ್ತುಗಳನ್ನು ಹಾಲಿ ತೀರ್ಪು ವಿಧಿಸಿದೆ. ಒಂದನೆಯದಾಗಿ ಸಂಬಂಧಿತ ವ್ಯಕ್ತಿಯು ತನ್ನ ಮೂಲ ಪರಿಶಿಷ್ಟ ಜಾತಿಯೆಂದು ರುಜುವಾತು ಮಾಡಬೇಕು. ಮರುಮತಾಂತರ ಹೊಂದಿದ ವಿಶ್ವಾಸಾರ್ಹ ಮತ್ತು ಪ್ರಶ್ನಾತೀತ ಪ್ರಮಾಣ ಇರಬೇಕು. ಮೂಲ ಜಾತಿಯ ಸದಸ್ಯರು ಈ ಮರುಮತಾಂತರವನ್ನು ಒಪ್ಪಿ ಆತನನ್ನು ಸಮುದಾಯದೊಳಕ್ಕೆ ಸ್ವೀಕರಿಸುವ ಪುರಾವೆಯನ್ನೂ ಪ್ರಸ್ತುತಪಡಿಸಬೇಕು. ತೊರೆಯುತ್ತಿರುವ ಧರ್ಮದೊಂದಿಗೆ ಎಲ್ಲ ಬಗೆಯ ಸಂಬಂಧಗಳನ್ನು ಕಡಿದುಕೊಳ್ಳಬೇಕು.

ಮತಾಂತರ ಹೊಂದಿದವರು ತಮ್ಮ ಮೀಸಲಾತಿ ಮತ್ತು ಸಂರಕ್ಷಣೆಯ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆ ಎಂಬ ಈ ನಿಲುವು ಸಂವಿಧಾನ ನೀಡುವ ಹಕ್ಕುಗಳೊಂದಿಗೆ ಘರ್ಷಣೆಗೆ ಇಳಿಯುತ್ತದೆ. ಸಂವಿಧಾನದ 14- 18ನೆಯ ಅನುಚ್ಛೇದಗಳು ಧಾರ್ಮಿಕ ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕು ಎಂದು ಸಾರುತ್ತವೆ. ಅದೇ ರೀತಿ ಸಂವಿಧಾನದ 25-28ನೆಯ ಅನುಚ್ಛೇದಗಳು ಸಮಾನತೆಯ ಹಕ್ಕನ್ನು ಮೂಲಭೂತ ಹಕ್ಕು ಎಂದು ಸಾರುತ್ತವೆ. ಕಾನೂನಿನ ಮುಂದೆ ಸಮಾನತೆಯನ್ನು ಸಾರಿ ಧರ್ಮದ ಆಧಾರದ ಮೇಲೆ ತಾರತಮ್ಯ ನಡೆಸುವುದನ್ನು ನಿಷೇಧಿಸುತ್ತವೆ. ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯವನ್ನೂ ನೀಡುತ್ತವೆ. ಹಿಂದೂ- ಬೌದ್ಧ-ಸಿಖ್ ಧರ್ಮಗಳ ವಿನಾ ಬೇರೆ ಯಾವುದೇ ಧರ್ಮಕ್ಕೆ ಮತಾಂತರ ಹೊಂದಿದರೆ ಪರಿಶಿಷ್ಟ ಜಾತಿಯ ಸೌಲತ್ತುಗಳು ಮತ್ತು ಸಂರಕ್ಷಣೆಗಳು ದೊರೆಯುವುದಿಲ್ಲ ಎಂಬ ಆದೇಶವು ಧಾರ್ಮಿಕ ಮತ್ತು ಸಮಾನತೆಯ ಮೂಲಭೂತ ಹಕ್ಕುಗಳೊಂದಿಗೆ ಹಕ್ಕುಗಳೊಂದಿಗೆ ಘರ್ಷಣೆಗೆ ಇಳಿಯುತ್ತದೆ. ಹೀಗಾಗಿ ಸಂವಿಧಾನದ ಧಾರ್ಮಿಕ ಸ್ವಾತಂತ್ರ್ಯದ ಅಡಿಯಲ್ಲೇ ಮತಾಂತರ ಹೊಂದಿದವರಿಗೆ ಮೀಸಲಾತಿ-ಸಂರಕ್ಷಣೆಯನ್ನು ನಿರಾಕರಿಸುವುದು ಸಂವಿಧಾನಬದ್ಧ ನಡೆ ಎನಿಸುವುದಿಲ್ಲ.


ಪರಿಶಿಷ್ಟ ಜಾತಿಗಳ 1950ರ ಆದೇಶದಂತೆ, 1950ರ (ಪರಿಶಿಷ್ಟ ಪಂಗಡಗಳ) ಆದೇಶ ಕೂಡ, ಧರ್ಮಾಧಾರಿತ ಅಲ್ಲ. ವ್ಯಕ್ತಿಯ ಪರಿಶಿಷ್ಟ ಪಂಗಡದ ಸ್ಥಾನಮಾನವು, ಗಿರಿಜನರ ಅಸ್ಮಿತೆ, ಅವರು ಅನುಸರಿಸಿಕೊಂಡು ಬಂದಿರುವ ಆಚರಣೆಗಳು ಪದ್ಧತಿಗಳನ್ನು ಅವಲಂಬಿಸಿರುತ್ತದೆಯೇ ವಿನಾ ಅವರ ಧರ್ಮವನ್ನು ಅಲ್ಲ.

ಆದರೆ ನ್ಯಾಯಾಲಯದ ಹಾಲಿ ತೀರ್ಪು ಪರಿಶಿಷ್ಟ ಪಂಗಡದ ಸ್ಥಾನಮಾನದ ಕುರಿತೂ ನಿರ್ಬಂಧ ವಿಧಿಸಿದೆ. ಗಿರಿಜನರು ಸಾರಸರ್ವಸ್ವದಲ್ಲಿ ತಮ್ಮ ಪಂಗಡದಲ್ಲೇ ಮುಂದುವರೆದಿದ್ದರೆ ಮಾತ್ರ ಮೀಸಲು ಮತ್ತು ಸಂರಕ್ಷಣೆ ಸೌಲಭ್ಯ ದೊರೆಯುತ್ತವೆ ಎಂದಿದೆ. ಪರಿಶಿಷ್ಟ ಜಾತಿಗಳ ಮೇಲಿನ ಮತಾಂತರ ನಿರ್ಬಂಧಗಳನ್ನು ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಿದೆ.

ಇದೇ ತರ್ಕ ಇತರೆ ಹಿಂದುಳಿದ ಜಾತಿಗಳಿಗೂ ಅನ್ವಯಿಸುವುದೇ? ನ್ಯಾಯಮೂರ್ತಿ ರಂಗನಾಥ ಮಿಶ್ರ ಆಯೋಗ 2007ರಲ್ಲಿ ನೀಡಿದ ವರದಿಯು ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರ ಹೊಂದಿದ ಪರಿಶಿಷ್ಟ ಜಾತಿಗಳಿಗೂ ಮೀಸಲಾತಿ ಸಿಗಬೇಕು ಎಂದು ಶಿಫಾರಸು ಮಾಡಿತ್ತು. ಈ ವರದಿಯನ್ನು ತಿರಸ್ಕರಿಸಿರುವ ಕೇಂದ್ರ ಸರ್ಕಾರ, 2022ರಲ್ಲಿ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅಧ್ಯಕ್ಷತೆಯಲ್ಲಿ ಮತ್ತೊಂದು ಆಯೋಗವನ್ನು ನೇಮಕ ಮಾಡಿತು. ಈ ಆಯೋಗಕ್ಕೆ ನೀಡಲಾಗಿರುವ ಗಡುವು ಇದೇ ಏಪ್ರಿಲ್‌ಗೆ ತೀರಲಿದೆ.

ಜಾತಿ ಮತ್ತು ವರ್ಣಗಳ ಆಧಾರದಲ್ಲಿ ತಾರತಮ್ಯ ಆಚರಣೆಯನ್ನು ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳು ಬೆಂಬಲಿಸಿಲ್ಲ ಎಂಬ ವಾದವನ್ನು ಮುಂದೆ ಮಾಡಲಾಗಿದೆ. ಆದರೆ ಈ ಎರಡೂ ಧರ್ಮಗಳಲ್ಲಿ ಜಾತಿ ಭೇದವಿರುವುದು ವಾಸ್ತವ. ತಾರತಮ್ಯ ಗುರುತಿಸಲು ಧರ್ಮದ ಗೆರೆಗಳನ್ನು ಎಳೆಯುವುದು ಸಲ್ಲದು.

ಅಮೆರಿಕದಲ್ಲಿ ಟ್ರಂಪ್ ವಿರುದ್ಧ ಭುಗಿಲೆದ್ದ ದೈತ್ಯ ಪ್ರತಿಭಟನೆ: ಬೀದಿಗಿಳಿದರು 80 ಲಕ್ಷ ಜನ!



ಅಮೆರಿಕದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ ಆಡಳಿತದ ವಿರುದ್ಧ ಜನಾಕ್ರೋಶ ಸ್ಫೋಟಗೊಂಡಿದೆ. ಶನಿವಾರ ಅಮೆರಿಕದ ಪ್ರಮುಖ ನಗರಗಳು ಸೇರಿದಂತೆ ವಿಶ್ವದ ವಿವಿಧೆಡೆ ಬೃಹತ್ ಪ್ರತಿಭಟನಾ ರ್‍ಯಾಲಿಗಳು ನಡೆದಿವೆ. ಟ್ರಂಪ್ ಅವರ ಕಾರ್ಯವೈಖರಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಟ್ರಂಪ್ ಅವರ ಸರ್ವಾಧಿಕಾರಿ ಧೋರಣೆ, ಆಡಳಿತ ಶೈಲಿ, ವಿವಾದಿತ ವಲಸೆ ನೀತಿಗಳು ಹಾಗೂ ಇರಾನ್ ವಿರುದ್ಧದ ಯುದ್ಧೋನ್ಮಾದದ ನಿಲುವುಗಳನ್ನು ಪ್ರತಿಭಟನಾಕಾರರು ಖಂಡಿಸಿದ್ದಾರೆ.

ಅಮೆರಿಕದ 50 ರಾಜ್ಯಗಳ ಸಣ್ಣ ಮತ್ತು ದೊಡ್ಡ ನಗರಗಳಲ್ಲಿ ಸುಮಾರು 3,300ಕ್ಕೂ ಹೆಚ್ಚು ಕಡೆ ಪ್ರತಿಭಟನಾ ಸಮಾವೇಶಗಳು ನಡೆದಿವೆ. ಈ ಐತಿಹಾಸಿಕ ಪ್ರತಿಭಟನೆಗಳಲ್ಲಿ ಕನಿಷ್ಠ 80 ಲಕ್ಷ ಜನರು ಪಾಲ್ಗೊಂಡಿದ್ದಾರೆ ಎಂದು ಅಂದಾಜಿಸಲಾಗಿದೆ.

2025ರ ಜನವರಿಯಲ್ಲಿ ಟ್ರಂಪ್ ಎರಡನೇ ಬಾರಿಗೆ ಅಧಿಕಾರಕ್ಕೇರಿದ ನಂತರ, ಜನಸಾಮಾನ್ಯರಲ್ಲಿ ಅವರ ನೀತಿಗಳ ಬಗ್ಗೆ ಮೂಡಿದ್ದ ಆತಂಕ ಈಗ ಪ್ರತಿಭಟನೆಗಳ ಮೂಲಕ ವ್ಯಕ್ತವಾಗಿದೆ. ನ್ಯೂಯಾರ್ಕ್‌ನಂತಹ ಜನನಿಬಿಡ ನಗರಗಳಲ್ಲಿ ಸಾವಿರಾರು ಮಂದಿ ಮೆರವಣಿಗೆ ನಡೆಸಿದ್ದು, ಈ ಹೋರಾಟಕ್ಕೆ ಆಸ್ಕರ್ ಪ್ರಶಸ್ತಿ ವಿಜೇತ, ಖ್ಯಾತ ನಟ ರಾಬರ್ಟ್ ಡಿ ನಿರೋ ಅವರಂತಹ ಗಣ್ಯರು ಬೆಂಬಲ ಸೂಚಿಸಿದ್ದಾರೆ.

ಈ ಪ್ರತಿಭಟನೆಗಳು ನೊ ಕಿಂಗ್ಸ್ ( ) ಎಂಬ ಚಳವಳಿಯ ಅಡಿಯಲ್ಲಿ ನಡೆಯುತ್ತಿವೆ. ಕಳೆದ ಒಂದು ವರ್ಷದಲ್ಲಿ ಈ ಚಳವಳಿಯ ಭಾಗವಾಗಿ ಅಮೆರಿಕದ ಜನರು ಟ್ರಂಪ್ ವಿರುದ್ಧ ಮೂರನೇ ಬಾರಿಗೆ ದೊಡ್ಡ ಮಟ್ಟದಲ್ಲಿ ರಸ್ತೆಗಿಳಿದಿದ್ದಾರೆ. ಈ ಹಿಂದೆ, ಜೂನ್‌ನಲ್ಲಿ ಟ್ರಂಪ್ ಅವರ 79ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಮೊದಲ ಬಾರಿಗೆ ಪ್ರತಿಭಟನೆಗಳು ನಡೆದಿದ್ದವು. ನಂತರ ಅಕ್ಟೋಬರ್‌ನಲ್ಲಿ ನಡೆದ ಎರಡನೇ ಹಂತದ ಹೋರಾಟದಲ್ಲಿ ಸುಮಾರು 70 ಲಕ್ಷ ಜನರು ಭಾಗವಹಿಸಿದ್ದರು. ಈಗ ಆ ಸಂಖ್ಯೆ 80 ಲಕ್ಷಕ್ಕೆ ಏರಿಕೆಯಾಗಿರುವುದು ಟ್ರಂಪ್ ವಿರೋಧಿ ಅಲೆ ದೇಶದಲ್ಲಿ ಹೆಚ್ಚಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಟ್ರಂಪ್ ವಿರುದ್ಧದ ಆಕ್ರೋಶ ಕೇವಲ ಅಮೆರಿಕಗೆ ಮಾತ್ರವೇ ಸೀಮಿತವಾಗಿಲ್ಲ. ಅಟ್ಲಾಂಟಿಕ್ ಸಾಗರದಾಚೆಗಿನ ಯುರೋಪಿನ ದೇಶಗಳಿಗೂ ಹಬ್ಬಿದೆ. ಶನಿವಾರ ಆರ್ಮ್‌ಸ್ಟರ್‌ಡಮ್, ಮ್ಯಾಡ್ರಿಡ್ ಮತ್ತು ರೋಮ್ ಸೇರಿದಂತೆ ಯುರೋಪಿನ ಹಲವು ಪ್ರಮುಖ ನಗರಗಳಲ್ಲಿ ಟ್ರಂಪ್ ನೀತಿಗಳ ವಿರುದ್ಧ ಬೃಹತ್ ರ್‍ಯಾಲಿಗಳು ನಡೆದಿವೆ.

ಒಂದೆಡೆ ಟ್ರಂಪ್ ಅವರ ಮೇಕ್ ಅಮೆರಿಕ ಗ್ರೇಟ್ ಎಗೈನ್ ಎಂಬ ಘೋಷಣೆಗೆ ಅವರ ಬೆಂಬಲಿಗರಿಂದ ಪ್ರಶಂಸೆ ವ್ಯಕ್ತವಾಗುತ್ತಿದ್ದರೂ, ಇನ್ನೊಂದೆಡೆ ಅವರ ವಿವಾದಾತ್ಮಕ ನಿರ್ಧಾರಗಳು ದೇಶವನ್ನು ವಿಭಜಿಸುತ್ತಿವೆ ಎಂಬ ದೂರು ಕೇಳಿಬರುತ್ತಿದೆ. ಸದ್ಯದ ಈ ಬೃಹತ್ ಪ್ರತಿಭಟನೆಗಳ ಬಗ್ಗೆ ಅಮೆರಿಕದ ಸರ್ಕಾರಿ ಮೂಲಗಳಿಂದ ಇನ್ನೂ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ.

84.56 ಲಕ್ಷ ಕೋಟಿ ರೂ.ನಷ್ಟದ ಅಮೆರಿಕ - ಇರಾನ್ ಸಂಘರ್ಷದಲ್ಲಿ ನಿಜಕ್ಕೂ ಗೆದ್ದವರಾರು?



ಅಮೆರಿಕದ ಬಹುಕೋಟಿ ಡಾಲರ್ ವೆಚ್ಚದ ಪೇಟ್ರಿಯಾಟ್ ಮತ್ತು ಥಾಡ್ ಕ್ಷಿಪಣಿ ನಿರೋಧಕ ವ್ಯವಸ್ಥೆಗಳು ಇರಾನ್‌ನ ಅಗ್ಗದ ಡ್ರೋನ್‌ಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಗಳ ದಾಳಿಯ ಮುಂದೆ ಮಂಡಿಯೂರಿವೆ. ಇತರ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರಿ ಲಾಭ ಮಾಡಿಕೊಳ್ಳುವ ಅಮೆರಿಕದ ರಕ್ಷಣಾ ಉದ್ಯಮದ ನೈಜ ಬಣ್ಣ ಈ ಯುದ್ಧದಲ್ಲಿ ಬಯಲಾಗಿದೆ.

ಮಧ್ಯಪ್ರಾಚ್ಯದಲ್ಲಿ ದಶಕಗಳಿಂದಲೂ ತನ್ನದೇ ಪಾರುಪತ್ಯದಲ್ಲಿ ಮೆರೆಯುತ್ತಿದ್ದ ಅಮೆರಿಕದ ದೊಡ್ಡಣ್ಣನ ವರ್ತನೆಗೆ ಇರಾನ್ ಇತ್ತೀಚಿನ ಪ್ರತಿದಾಳಿಯು ತೀವ್ರ ಮುಖಭಂಗವನ್ನು ಉಂಟುಮಾಡಿದೆ. ಜಗತ್ತಿನ ಅತಿ ದೊಡ್ಡ ಸೇನಾಶಕ್ತಿ ಎಂದು ಬೀಗುತ್ತಿದ್ದ ಅಮೆರಿಕ, ಇರಾನ್‌ನ ಸೇನಾ ಸಾಮರ್ಥ್ಯವನ್ನು ಅಂದಾಜಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದು ಜಾಗತಿಕ ಮಟ್ಟದಲ್ಲಿ ಸಾಬೀತಾಗಿದೆ. ತನ್ನ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಮಿಲಿಟರಿ ಬಲದ ಮೂಲಕ ಯಾವುದೇ ದೇಶವನ್ನು ಹತ್ತಿಕ್ಕಬಹುದು ಎಂಬ ಅಮೆರಿಕದ ದರ್ಪಕ್ಕೆ ಈ ಸಂಘರ್ಷವು ದೊಡ್ಡ ಆಘಾತವನ್ನು ನೀಡಿದೆ.

ಈ ಸಂಘರ್ಷದಲ್ಲಿ ಅಮೆರಿಕ ಮತ್ತು ಇಸ್ರೇಲ್ ಅನುಭವಿಸಿದ ಅತಿ ದೊಡ್ಡ ಸೋಲೆಂದರೆ ಅವರ ಗುಪ್ತಚರ ವ್ಯವಸ್ಥೆಯ ಸಂಪೂರ್ಣ ವೈಫಲ್ಯ. ಜಗತ್ತಿನಾದ್ಯಂತ ಬೇಹುಗಾರಿಕೆ ನಡೆಸಲು ಶತಕೋಟಿ ಡಾಲರ್‌ಗಳನ್ನು ಸುರಿಯುವ ಸಿಐಎ ಮತ್ತು ಮೊಸಾದ್, ಇರಾನ್‌ನ ಪ್ರತಿದಾಳಿಯ ತೀವ್ರತೆಯನ್ನು ಕನಿಷ್ಠ ಮಟ್ಟದಲ್ಲೂ ಊಹಿಸಲು ಸಾಧ್ಯವಾಗಲಿಲ್ಲ. ಇರಾನ್ ಕೇವಲ ಸಣ್ಣ-ಪುಟ್ಟ ದಾಳಿಗಳಿಗೆ ಸೀಮಿತವಾಗಬಹುದು ಎಂಬ ಅಮೆರಿಕದ ಉಡಾಫೆಯ ಲೆಕ್ಕಾಚಾರವು, ಅದರದೇ ಸೇನಾ ನೆಲೆಗಳ ಮೇಲೆ ಬಿದ್ದ ಕ್ಷಿಪಣಿಗಳ ಮೂಲಕ ತಲೆಕೆಳಗಾಗಿದೆ.

ಇಲ್ಲಿ ಗಮನಿಸಬೇಕಾದ ಅತ್ಯಂತ ವಿಪರ್ಯಾಸದ ಸಂಗತಿಯೆಂದರೆ ಅಮೆರಿಕದ ಬೃಹತ್ ರಕ್ಷಣಾ ಬಜೆಟ್‌ನ ವ್ಯರ್ಥತೆ. ಅಮೆರಿಕವು ವಾರ್ಷಿಕವಾಗಿ ಸುಮಾರು 84.56 ಲಕ್ಷ ಕೋಟಿ ರೂಪಾಯಿಗಳನ್ನು (ಭಾರತದ ವಾರ್ಷಿಕ ಬಜೆಟ್ 53.47 ಲಕ್ಷ ಕೋಟಿ ರೂ. ಇದಕ್ಕಿಂತ ಒಂದೂಕಾಲು ಪಟ್ಟು ಹೆಚ್ಚು) ಕೇವಲ ತನ್ನ ಮಿಲಿಟರಿಗಾಗಿ ಸುರಿಯುತ್ತಿದೆ. ಇಷ್ಟೊಂದು ಅಪಾರ ಪ್ರಮಾಣದ ಹಣವನ್ನು ಖರ್ಚು ಮಾಡಿಯೂ, ಆರ್ಥಿಕ ದಿಗ್ಬಂಧನಗಳಿಂದ ನಲುಗಿರುವ ಇರಾನ್‌ನಂತಹ ದೇಶದ ದಾಳಿಯಿಂದ ತನ್ನ ಸೇನಾ ನೆಲೆಗಳನ್ನು ರಕ್ಷಿಸಿಕೊಳ್ಳಲು ಅಮೆರಿಕಕ್ಕೆ ಸಾಧ್ಯವಾಗಿಲ್ಲ. ಇದು ಅಮೆರಿಕದ ಮಿಲಿಟರಿ ವ್ಯವಸ್ಥೆಯು ಕೇವಲ ಕಾಗದದ ಮೇಲಿನ ಹುಲಿಯೇ ಎಂಬ ಗಂಭೀರ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಅಮೆರಿಕದ ಬಹುಕೋಟಿ ಡಾಲರ್ ವೆಚ್ಚದ ಪೇಟ್ರಿಯಾಟ್ ಮತ್ತು ಥಾಡ್ ಕ್ಷಿಪಣಿ ನಿರೋಧಕ ವ್ಯವಸ್ಥೆಗಳು ಇರಾನ್‌ನ ಅಗ್ಗದ ಡ್ರೋನ್‌ಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಗಳ ದಾಳಿಯ ಮುಂದೆ ಮಂಡಿಯೂರಿವೆ. ಇತರ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರಿ ಲಾಭ ಮಾಡಿಕೊಳ್ಳುವ ಅಮೆರಿಕದ ರಕ್ಷಣಾ ಉದ್ಯಮದ ನೈಜ ಬಣ್ಣ ಈ ಯುದ್ಧದಲ್ಲಿ ಬಯಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನವಿದ್ದರೂ, ಪ್ರಾಯೋಗಿಕವಾಗಿ ಯುದ್ಧಭೂಮಿಯಲ್ಲಿ ಅಮೆರಿಕದ ರಕ್ಷಣಾ ವ್ಯವಸ್ಥೆಗಳು ಎಷ್ಟೊಂದು ದುರ್ಬಲವಾಗಿವೆ ಎಂಬುದನ್ನು ಈ ಘಟನೆ ಜಗತ್ತಿಗೆ ತೋರಿಸಿಕೊಟ್ಟಿದೆ.

ಈ ವೈಫಲ್ಯದ ಹೊಣೆಯನ್ನು ಹೊತ್ತುಕೊಳ್ಳುವ ಬದಲು, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಧ್ಯಪ್ರಾಚ್ಯದ ಮಿತ್ರರಾಷ್ಟ್ರಗಳ ಮೇಲೆ ಗೂಬೆ ಕೂರಿಸುತ್ತಿರುವುದು ಅವರ ಅವಕಾಶವಾದಿ ರಾಜಕಾರಣಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಮೆರಿಕದ ಸೇನಾ ನೆಲೆಗಳಿಗೆ ರಕ್ಷಣೆ ನೀಡಲು, ಆತಿಥೇಯ ದೇಶಗಳೇ ಹಣ ಪಾವತಿಸಬೇಕು ಎಂದು ಟ್ರಂಪ್ ಧಮಕಿ ಹಾಕಿರುವುದು ಅಮೆರಿಕದ ದಬ್ಬಾಳಿಕೆಯ ನೀತಿಯನ್ನು ಸ್ಪಷ್ಟಪಡಿಸುತ್ತದೆ. ಮಿತ್ರ ರಾಷ್ಟ್ರಗಳನ್ನು ಕೇವಲ ಹಣ ಕೀಳುವ ಎಟಿಎಂ ಯಂತ್ರಗಳಂತೆ ನೋಡುವ ಅಮೆರಿಕದ ನೈತಿಕ ದಿವಾಳಿತನವನ್ನು ಇದು ಎತ್ತಿ ತೋರಿಸುತ್ತದೆ.

ತನ್ನ ಸ್ವಾರ್ಥ ಸಾಧನೆಗಾಗಿ ಮಧ್ಯಪ್ರಾಚ್ಯದಲ್ಲಿ ಅಮೆರಿಕ ಸೃಷ್ಟಿಸಿರುವ ಅಸ್ಥಿರತೆಯು ಇಡೀ ಜಗತ್ತು ಸಂಕಷ್ಟಕ್ಕೆ ಸಿಲುಕಿದೆ. ತನಗೆ ಇಷ್ಟವಿಲ್ಲದ ಸರ್ಕಾರಗಳನ್ನು ಉರುಳಿಸುವುದು, ನಿರಂತರವಾಗಿ ಯುದ್ಧದ ವಾತಾವರಣವನ್ನು ನಿರ್ಮಿಸುವುದು ಮತ್ತು ತನ್ನ ಶಸ್ತ್ರಾಸ್ತ್ರ ವ್ಯಾಪಾರವನ್ನು ಬೆಳೆಸುವುದು ಅಮೆರಿಕದ ಕುತಂತ್ರದ ವಿದೇಶಾಂಗ ನೀತಿಯ ಭಾಗವಾಗಿದೆ. ಇರಾನ್ ಮೇಲಿನ ಅನಗತ್ಯ ಪ್ರಚೋದನೆಯು ಇಂದು ಜಾಗತಿಕ ತೈಲ ಪೂರೈಕೆಗೆ ಕಂಟಕವಾಗಿ ಪರಿಣಮಿಸಿದ್ದು, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳು ಈ ಅಮೆರಿಕನ್ ದುಸ್ಸಾಹಸದ ಬೆಲೆಯನ್ನು ತೆರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಅಮೆರಿಕವು ಇತರ ದೇಶಗಳ ಮೇಲೆ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಪ್ರಜಾಪ್ರಭುತ್ವದ ಪಾಠ ಮಾಡುತ್ತಾ, ತಾನೇ ಅತ್ಯಂತ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಿರುವುದು ಅದರ ದ್ವಂದ್ವ ನೀತಿಯಾಗಿದೆ. ಇಸ್ರೇಲ್‌ಗೆ ಕುರುಡು ಬೆಂಬಲ ನೀಡಿ, ಇರಾನ್ ಅನ್ನು ಕೆಣಕುವ ಮೂಲಕ ಅಮೆರಿಕವು ಅಂತಾರಾಷ್ಟ್ರೀಯ ಕಾನೂನುಗಳನ್ನು ಮತ್ತು ಶಾಂತಿ ಒಪ್ಪಂದಗಳನ್ನು ಗಾಳಿಗೆ ತೂರಿದೆ. ತನ್ನ ಸೇನಾ ನೆಲೆಗಳಿಗೆ ನಷ್ಟವಾದಾಗ ಮಾತ್ರ ಬೊಬ್ಬೆ ಹೊಡೆಯುವ ಅಮೆರಿಕ, ಇತರ ದೇಶಗಳ ಅಮಾಯಕ ಜನರ ಪ್ರಾಣಹಾನಿಯ ಬಗ್ಗೆ ಕನಿಷ್ಠ ಕಾಳಜಿಯನ್ನೂ ತೋರುತ್ತಿಲ್ಲ.

ಈ ಘಟನೆಯು ಜಾಗತಿಕ ಮಟ್ಟದಲ್ಲಿ ಅಮೆರಿಕದ ಸೂಪರ್ ಪವರ್ ಪಟ್ಟವನ್ನು ಕಸಿದುಕೊಳ್ಳುವ ಆರಂಭಿಕ ಸೂಚನೆಯಾಗಿದೆ. ಇರಾನ್‌ನಂತಹ ಪ್ರಾದೇಶಿಕ ಶಕ್ತಿಯು ಅಮೆರಿಕದ ಕಣ್ಣಿಗೆ ಬೆರಳಿಟ್ಟು ಅದರ ಸೇನಾ ನೆಲೆಗಳ ಮೇಲೆ ನೇರ ದಾಳಿ ಮಾಡುವ ಧೈರ್ಯ ತೋರಿದೆ ಎಂದರೆ, ಅಮೆರಿಕದ ಡಿಟೆರೆನ್ಸ್ (ಭಯೋತ್ಪಾದಕ ನಿರೋಧಕ ಶಕ್ತಿ) ಸಂಪೂರ್ಣವಾಗಿ ನಾಶವಾಗಿದೆ ಎಂದೇ ಅರ್ಥ. ರಷ್ಯಾ, ಚೀನಾ ಸೇರಿದಂತೆ ಇತರ ರಾಷ್ಟ್ರಗಳು ಅಮೆರಿಕದ ಈ ದೌರ್ಬಲ್ಯವನ್ನು ಬಹಳ ಹತ್ತಿರದಿಂದ ಗಮನಿಸುತ್ತಿದ್ದು, ಭವಿಷ್ಯದಲ್ಲಿ ಅಮೆರಿಕದ ಏಕಸ್ವಾಮ್ಯಕ್ಕೆ ಇದು ಬಹುದೊಡ್ಡ ಸವಾಲಾಗಲಿದೆ.

ಇಷ್ಟೆಲ್ಲಾ ಮುಖಭಂಗವಾದರೂ ಅಮೆರಿಕ ತನ್ನ ತಪ್ಪುಗಳಿಂದ ಪಾಠ ಕಲಿಯುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಬದಲಾಗಿ, ಯುದ್ಧದ ನಷ್ಟವನ್ನು ಸರಿದೂಗಿಸಲು ಮತ್ತು ತನ್ನ ಮಿಲಿಟರಿ ಬಲವನ್ನು ಮರಳಿ ಸ್ಥಾಪಿಸಲು ಮಧ್ಯಪ್ರಾಚ್ಯದ ದೇಶಗಳ ಮೇಲೆ ಆರ್ಥಿಕ ಮತ್ತು ರಾಜಕೀಯ ಒತ್ತಡವನ್ನು ಹೇರಲು ಮುಂದಾಗಿದೆ. ಇದು ಅಮೆರಿಕದ ಹತಾಶೆ ಮತ್ತು ತನ್ನ ಕೈಜಾರುತ್ತಿರುವ ಜಾಗತಿಕ ನಾಯಕತ್ವವನ್ನು ಉಳಿಸಿಕೊಳ್ಳುವ ವಿಫಲ ಯತ್ನವಷ್ಟೇ ಆಗಿದೆ.

84.56 ಲಕ್ಷ ಕೋಟಿ ರೂಪಾಯಿಗಳ ಬೃಹತ್ ಬಜೆಟ್ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿದ್ದರೂ, ಅಮೆರಿಕದ ವಿದೇಶಾಂಗ ನೀತಿಯು ಅಹಂಕಾರ ಮತ್ತು ತಪ್ಪು ಲೆಕ್ಕಾಚಾರಗಳ ಆಗರವಾಗಿದೆ. ಇರಾನ್‌ನ ಪ್ರತಿದಾಳಿಯು ಅಮೆರಿಕದ ಸೇನಾ ಶ್ರೇಷ್ಠತೆಯ ಮುಖವಾಡವನ್ನು ಕಳಚಿಟ್ಟಿದೆ. ಮಿತ್ರರಾಷ್ಟ್ರಗಳನ್ನು ಶೋಷಿಸುವ ಮತ್ತು ಜಗತ್ತಿನಾದ್ಯಂತ ಯುದ್ಧೋನ್ಮಾದವನ್ನು ಪ್ರಚೋದಿಸುವ ಅಮೆರಿಕದ ನೀತಿಗಳು, ಮುಂದೊಂದು ದಿನ ಅದರ ಆರ್ಥಿಕ ಮತ್ತು ಜಾಗತಿಕ ಪತನಕ್ಕೆ ಕಾರಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಬೆಂಗಳೂರಿಗರಿಗೆ ತಟ್ಟಲಿದೆ ವಿದ್ಯುತ್, ನೀರಿನ ದರ ಏರಿಕೆಯ ಬಿಸಿ ಏಪ್ರಿಲ್ 1ರಿಂದಲೇ ಜಾರಿ

ಬೆಂಗಳೂರು,ಮಾ.30-

ಹೊಸ ಆರ್ಥಿಕ ವರ್ಷದ ಮೊದಲ ದಿನವೇ ರಾಜ್ಯದ ಜನತೆಗೆ ವಿದ್ಯುತ್ ಹಾಗೂ ನೀರಿನ ದರ ಏರಿಕೆಯ ಬಿಸಿ ತಟ್ಟುವ ಸಾಧ್ಯತೆ ಇದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ () ಏಪ್ರಿಲ್ 1ರಿಂದ ಹೊಸ ದರ ಜಾರಿಗೆ ತರುವ ಬಗ್ಗೆ ಅಂತಿಮ ಹಂತದ ಚರ್ಚೆಯಲ್ಲಿ ತೊಡಗಿದೆ.

ಯೂನಿಟ್‌ಗೆ 40-50 ಪೈಸೆ ಹೆಚ್ಚಳ ಸಾಧ್ಯತೆ ಇದ್ದು, ಬೆಸ್ಕಾಂ () ಸೇರಿದಂತೆ ಐದು ಎಸ್ಕಾಂಗಳ ಪ್ರಸ್ತಾವನೆಯಂತೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 40 ರಿಂದ 50 ಪೈಸೆವರೆಗೆ ಹೆಚ್ಚಳ ಮಾಡುವ ಸಾಧ್ಯತೆ ಇದೆ. ನಷ್ಟದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳು ಆದಾಯದ ಕೊರತೆ ಸರಿಪಡಿಸಲು ಈ ಕ್ರಮ ಅನಿವಾರ್ಯ ಎಂದು ಅಧಿಕಾರಿಗಳು ವಾದಿಸಿದ್ದಾರೆ.

ಯಾರಿಗೆ ಪರಿಣಾಮ?

ಗೃಹ ಬಳಕೆದಾರರು, ವಾಣಿಜ್ಯ ಬಳಕೆದಾರರು, ಕೈಗಾರಿಕಾ ಕ್ಷೇತ್ರ, ಈ ಮೂರು ವರ್ಗಗಳಿಗೂ ದರ ಏರಿಕೆಯ ನೇರ ಪರಿಣಾಮ ಬೀಳಲಿದೆ.

ಗೃಹ ಜ್ಯೋತಿ ಫಲಾನುಭವಿಗಳಿಗೆ ವಿನಾಯಿತಿ :

ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಗ್ರಾಹಕರ ಬಿಲ್ ಅನ್ನು ಸರ್ಕಾರವೇ ಭರಿಸುವುದರಿಂದ ಅವರಿಗೆ ನೇರ ಹೊರೆ ಇರುವುದಿಲ್ಲ. ಆದರೆ 200 ಯೂನಿಟ್ ಮೀರಿದ ಬಳಕೆದಾರರು ಹೆಚ್ಚಿದ ದರವನ್ನು ಪಾವತಿಸಬೇಕಾಗುತ್ತದೆ.

ಸ್ಥಿರ ಶುಲ್ಕವೂ ಏರಿಕೆ ಸಾಧ್ಯತೆ ಯೂನಿಟ್ ದರ ಮಾತ್ರವಲ್ಲದೆ, ಸ್ಥಿರ ಶುಲ್ಕವನ್ನೂ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ.

ವಾಣಿಜ್ಯ ವಿದ್ಯುತ್ ದರ ಏರಿಕೆಯಾದರೆ ಹೋಟೆಲ್, ಸಣ್ಣ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗಿ, ಅದರ ಪರಿಣಾಮವಾಗಿ ವಸ್ತುಗಳ ಬೆಲೆ ಏರಿಕೆ ಸಾಧ್ಯತೆ ಇದೆ.

ನೀರಿನ ದರವೂ ಏರಿಕೆ : ಏಪ್ರಿಲ್ 1ರಿಂದ ಬೆಂಗಳೂರಿನಲ್ಲಿ ನೀರಿನ ಬಿಲ್ಲಿನಲ್ಲೂ ಶೇ. 3ರಷ್ಟು ಹೆಚ್ಚಳ ಜಾರಿಗೆ ಬರಲಿದೆ.

ನೀರಿನ ಸರಬರಾಜು ವೆಚ್ಚ, ನಿರ್ವಹಣಾ ವೆಚ್ಚ, ವಿದ್ಯುತ್ ಮತ್ತು ಮೂಲಸೌಕರ್ಯ ಖರ್ಚು ಹೆಚ್ಚಳ ಮಾಡಲಾಗುತ್ತಿದ್ದು ಜಲಮಂಡಳಿಯ ಆರ್ಥಿಕ ಒತ್ತಡ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷವೇ ಪ್ರತಿವರ್ಷ ನೀರಿನ ದರವನ್ನು ಶೇ. 3ರಷ್ಟು ಹೆಚ್ಚಿಸಲು ಅನುಮೋದನೆ ನೀಡಲಾಗಿದ್ದು, ಅದರ ಭಾಗವಾಗಿ ಈ ವರ್ಷದ ಏರಿಕೆ ಜಾರಿಯಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR